ಬಂಟರ ಸಂಘ ಬೆಂಗಳೂರು
BUNTS' SANGHA BANGALORE

www.buntsanghablr.com

# ಸ್ನೇಹ ಚಿಂತನ

ಮಾಸ ಪತ್ರಿಕೆ

ಮಾರ್ಚ್ 2021
ಸಂಪುಟ 17, ಸಂಚಿಕೆ 02
ಸಂಚಿಕೆ ಬೆಲೆ ರೂ. 1/-

324, Chord Road
Vijayanagara
Bengaluru - 560 040.
Ph: 080 2339 9323, 2339 9635
E: info@buntsanghablr.com



ಬೆಂಗಳೂರು ಬಂಟರ ಸಂಘದ ಯೋಜನಾ ಸಮಿತಿಯ ಚೇರ್‌ಮೆನ್ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರು
ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–II ಯೋಜನೆಗೆ 1 ಕೋಟಿ ರೂಗಳ ಉದಾರ ದೇಣಿಗೆ ನೀಡಿದರು.







# G M VIDYANIKETAN PUBLIC SCHOOL, BRAHMAVAR

(Affiliated to the CBSE, Delhi)

AN ISO 9001:2015 CERTIFIED INSTITUTION

TEL.: +91 820 2590399 | MOB : +91 9845317165 | E-mail : gmvps@rediffmail.com | web : www.gmvps.net








# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 17** **MARCH 2021** **ISSUE 02**

**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಕುಮಾರಿ ಶಾಲ್ಮಲೀ ಸುರೇಶ್**
**ಶ್ರೀಮತಿ ಶ್ಯಾಮಲಾ ಶೆಟ್ಟಿ**
**ಶ್ರೀಮತಿ ಅನುಷಾ ಶೆಟ್ಟಿ**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

– ಸಂಪಾದಕ ಮಂಡಳಿ

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ತಾಂಬೂಲ ಅಥವಾ ವೀಳ್ಯದೆಲೆಯ ಮಹತ್ವ | 5 |
| 5. | ಶಿವರಾತ್ರಿ ಶಕ್ತಿ ಸಮೃದ್ಧಿಯ ದಿನ | 8 |
| 6. | Amritham Jalam, Save Water for Secure Future | 10 |
| 7. | ಲೈನ್ ತಪ್ಪುತ್ತಿರುವ ಆನ್‌ಲೈನ್ ಶಿಕ್ಷಣ, ಮಕ್ಕಳಿಗೆ ಶಿಕ್ಷೆಯಾಗದಿರಲಿ | 13 |
| 8. | ಕನಸೆಂಬ ಹಣತೆಯೋ ಅಥವಾ ಹೊರೆಯೋ | 16 |
| 9. | Ignite a brighter future | 19 |
| 10. | ಹಳ್ಳಿ ಬದುಕು ಅಂದು ಇಂದು | 21 |

**ಮುಖಪುಟ**

**ಶ್ರೀ ಕೆ. ಪ್ರಕಾಶ್ ಶೆಟ್ಟಿಯವರಿಂದ BSRNSV-II ಯೋಜನೆಗೆ ದೇಣಿಗೆ**

**ಪ್ರಗತಿಯಲ್ಲಿರುವ ಯೋಜನೆ**

# ಸಂಪಾದಕೀಯ



ಬೆಂಗಳೂರು ಬಂಟರ ಸಂಘ ಶಿಕ್ಷಣಕ್ಕೆ ಬಹಳ ಮಹತ್ವವನ್ನು ಕೊಡುತ್ತಾ ಬಂದಿದೆ. ಸುಮಾರು 30 ವರ್ಷಗಳ ಹಿಂದೆ ಪ್ರಾರಂಭವಾದ ಈ ವಿದ್ಯಾಸಂಸ್ಥೆ ಇಂದು ಬಂಟ್ಸ್ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಎಂಬ ಹೆಸರಿನಲ್ಲಿ ಬೆಂಗಳೂರಿನ ವಿಜಯನಗರದ ಆಸುಪಾಸಿನಲ್ಲಿ ಒಂದು ಪ್ರತಿಷ್ಠಿತ ವಿದ್ಯಾಸಂಸ್ಥೆಯಾಗಿ ಬೆಳೆದು ಸುಮಾರು 4000ಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಹೊಂದಿದೆ. ಶಿಕ್ಷಣದ ಮಹತ್ವವನ್ನು ಅರಿತು ಅಂದಿನ ದಿನಗಳಲ್ಲಿ ಈ ಕೆಲಸಕ್ಕೆ ಮುಂದಾದ ನಮ್ಮ ಹಿರಿಯರನ್ನು ನಾವೆಲ್ಲರೂ ಇಂದು ನೆನಪಿಸಿಕೊಳ್ಳಬೇಕು ಹಾಗೆಯೇ ನಂತರದ ದಿನಗಳಲ್ಲಿ ಈ ನಿಟ್ಟಿನಲ್ಲಿ ಶಾಲೆಯ ಬೆಳವಣಿಗೆಗೆ ದುಡಿದವರೆಲ್ಲರನ್ನು ಅಭಿನಂದಿಸುವಂತಹ ಕೆಲಸವಾಗಬೇಕು.

ವಿದ್ಯೆಯ ಮಹತ್ವವನ್ನು ಸಾರಿದವರು ಅನೇಕರು. ಸುಭಾಷಿತಗಳಲ್ಲಿ ಹೇಳಿದಂತೆ "ಮಕ್ಕಳಿಗೆ ತಂದೆ ಬಾಲ್ಯದೊಳಕ್ಕರ ವಿದ್ಯೆಗಳನರಿಪದಿರ್ದೊಡೆ ಕೊಂದಂ, ಲಕ್ಕ ಧನಮಿರಲು ಕೆಡುಗುಂ, ಚಿಕ್ಕಂದಿನ ವಿದ್ಯೆ ಪೊರೆಗು ಚೂಡಾರತ್ನ" ಎಷ್ಟೇ ಹಣವಿದ್ದರೂ ಪ್ರಯೋಜನವಿಲ್ಲ, ಚಿಕ್ಕಂದಿನಿಂದ ಪಡೆದ ವಿದ್ಯೆಯು ಕೊನೆಯವರೆಗೂ ನಿಮ್ಮನ್ನು ಸಲಹುತ್ತದೆ. ಆದ್ದರಿಂದ ಹೆತ್ತವರು ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಬೇಕು.

1820ರಲ್ಲಿ ಆಗಿನ ಮೇದಿನಿಪುರ, ಬೆಂಗಾಲ್ ಪ್ರೆಸಿಡೆನ್ಸಿಯಲ್ಲಿ ಜನಿಸಿದ ಶ್ರೀ ಈಶ್ವರ ಚಂದ್ರ ವಿದ್ಯಾಸಾಗರರವರು ಬಹಳ ಕಡು ಬಡತನದಿಂದ ಬಂದವರು. ಅವರ ತಂದೆ ತಾಯಿಯರಿಗೆ ಇವರಿಗೆ ವಿದ್ಯಾಭ್ಯಾಸ ನೀಡುವ ಶಕ್ತಿಯಿರಲಿಲ್ಲ. ಆದರೂ ಕಷ್ಟದಿಂದ ವಿದ್ಯಾವಂತರಾಗಿ, ವೇದಾಂತ, ವ್ಯಾಕರಣ, ಸಾಹಿತ್ಯ, ಸಂಸ್ಕೃತ, ಕಾನೂನು ಇತ್ಯಾದಿಗಳಲ್ಲಿ ಪರಿಣಿತರಾಗಿ, ಜ್ಞಾನ ಸ್ಪರ್ಧೆ ವಿಜೇತರಾಗಿ ವಿದ್ಯಾಸಾಗರ ಎಂಬ ಬಿರುದನ್ನು ಪಡೆದರು. ಅನೇಕ ವಿದ್ಯಾಸಂಸ್ಥೆಗಳ ಪ್ರಾರಂಭಕ್ಕೆ ಕಾರಣೀಭೂತರಾದರು. ವಿದ್ಯಾಭ್ಯಾಸ ಪದ್ಧತಿಯಲ್ಲಿ ಅನೇಕ ಬದಲಾವಣೆಗಳನ್ನು ತಂದರು. ಹಳ್ಳಿ ಹಳ್ಳಿಗಳಲ್ಲಿ ಬಡಮಕ್ಕಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಶಾಲೆಗಳನ್ನು ಸ್ಥಾಪಿಸಲು ಪಣತೊಟ್ಟರು. ಇಂತಹ ಅನೇಕರು ನಮ್ಮ ದೇಶದಲ್ಲಿ ವಿದ್ಯಾಭ್ಯಾಸಕ್ಕಾಗಿ ಮಹತ್ವದ ಕೊಡುಗೆಯನ್ನು ನೀಡಿದವರೂ ಇದ್ದಾರೆ.

ಇಂದಿನ ದಿನಗಳಲ್ಲಿ ಯಾವ ತರಹದ ವಿದ್ಯಾಭ್ಯಾಸ ನಮಗೆ ಬೇಕಾಗಿದೆ? ಸ್ವಾಮಿ ವಿವೇಕಾನಂದರು ಹೇಳುವಂತೆ ಚಾರಿತ್ರ್ಯ ನಿರ್ಮಾಣ ಮಾಡುವ, ಮಾನಸಿಕ ಸಾಮಾರ್ಥ್ಯ ಹೆಚ್ಚಿಸುವ, ಬುದ್ಧಿ ಶಕ್ತಿಯನ್ನು ವಿಸ್ತರಿಸುವ, ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವಂತೆ ಮಾಡುವ ಶಿಕ್ಷಣವು ನಮಗೆ ಬೇಕಾಗಿದೆ. ಜೀವನದಲ್ಲಿ ಯಶಸ್ವಿಯಾಗುವುದು ಹೇಗೆ ಮುಖ್ಯವೋ, ಇದಕ್ಕೆ ಪೂರಕವಾಗಿ ವಿದ್ಯೆ ಕೂಡಾ ಇರಬೇಕಾಗುತ್ತದೆ. ಶಿಕ್ಷಣವು ನಮ್ಮ ಜ್ಞಾನವನ್ನು ಹಾಗೂ ಆಲೋಚನಾ ಶಕ್ತಿಯನ್ನು ಹೆಚ್ಚಿಸುತ್ತದೆ. ಮಾಜಿ ರಾಷ್ಟ್ರಪತಿಗಳಾದ ಡಾ। ಅಬ್ದುಲ್ ಕಲಾಂರವರ ಚಿಂತನೆಯಂತೆ, ಶಿಕ್ಷಣವು ಜಗತ್ತನ್ನು ಬದಲಾಯಿಸಲು ನೀವು ಬಳಸಬಹುದಾದ ಅತ್ಯಂತ ಶಕ್ತಿಶಾಲಿ ಅಸ್ತ್ರವಾಗಿದೆ. ಶಿಕ್ಷಣದ ಉದ್ದೇಶವೆಂದರೆ ಕೌಶಲ್ಯ ಮತ್ತು ಪರಿಣತಿಯೊಂದಿಗೆ ಉತ್ತಮ ಮನುಷ್ಯರನ್ನು ರೂಪಿಸುವುದು. ಕಲಿಕೆಯು ಸೃಜನಶೀಲತೆಯನ್ನು ನೀಡುತ್ತದೆ, ಸೃಜನಶೀಲತೆ ಚಿಂತನೆಗೆ ಕಾರಣವಾಗುತ್ತದೆ, ಚಿಂತನೆಯು ಜ್ಞಾನವನ್ನು ನೀಡುತ್ತದೆ ಮತ್ತು ಜ್ಞಾನವು ನಿಮ್ಮನ್ನು ಅಗ್ರಗಣ್ಯನಾಗಿಸುತ್ತದೆ. ಶಿಕ್ಷಣ ತಜ್ಞ ಪ್ರೊ. ಡಾ. ಗುರುರಾಜ ಕರ್ಜಗಿಯವರೂ ಶಿಕ್ಷಣದ ಮಹತ್ವವನ್ನು ಸಾರುತ್ತಾ, ಬದುಕಿನ ಸಾರ್ಥಕತೆಯನ್ನು ಅರ್ಥೈಸಿಕೊಟ್ಟಿದ್ದಾರೆ.

ಪ್ರಸ್ತುತ ನಮ್ಮ ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–II, ಯಲಚಗುಪ್ಪೆ, ತಾವರೆಕೆರೆಯಲ್ಲಿ ನಿರ್ಮಾಣದ ಅಂತಿಮ ಹಂತದಲ್ಲಿದ್ದು, ಅತ್ಯಂತ ಶ್ರೇಷ್ಠ ಶ್ರೇಣಿಯ ವಿದ್ಯಾಭ್ಯಾಸವನ್ನು ನೀಡುವ ಉದ್ದೇಶದಿಂದ ಎಲ್ಲಾ ಆಧುನಿಕ ಸೌಕರ್ಯಗಳಿಂದ ಕೂಡಿದ ಕ್ಯಾಂಪಸ್ ನಿರ್ಮಿಸುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಇದೊಂದು ಮೈಲುಗಲ್ಲಾಗಿ ಹೊರ ಹೊಮ್ಮಲಿ ಎಂಬುದು ನಮ್ಮೆಲ್ಲರ ಆಶಯ.

**ಎಂ. ಮುರಲೀಧರ ಹೆಗ್ಡೆ**
hegdemm@gmail.com

# ಅಧ್ಯಕ್ಷರ ಮಾತು



**ಯೋಜನಾ ಸಮಿತಿ ಚೇರ್‌ಮೆನ್ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರಿಗೆ ಕೋಟಿ ನಮನಗಳು**

ಮಾನ್ಯ ಸದಸ್ಯ ಬಾಂಧವರೇ,

ಸರಿಸುಮಾರು 60 ಕೋಟಿ ರೂ. ವೆಚ್ಚದಲ್ಲಿ ಯಲಚಗುಪ್ಪೆಯಲ್ಲಿ ನಿರ್ಮಾಣಗೊಳ್ಳುತ್ತಿರುವ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-II ಯೋಜನೆ ಅಂತಿಮ ಹಂತದಲ್ಲಿದೆ ಎಂದು ತಿಳಿಸಲು ಹರ್ಷಿಸುತ್ತೇವೆ.

ಸರಕಾರವು ಎಲ್ಲಾ ಶಿಕ್ಷಣ ಸಂಸ್ಥೆಗಳು 70% ಶಾಲಾ ಶುಲ್ಕವನ್ನು ಮಾತ್ರವೇ ಪಡೆಯತಕ್ಕದ್ದು ಎಂದು ಇತ್ತೀಚೆಗೆ ಆದೇಶ ಹೊರಡಿಸಿದೆ. ಸರ್ಕಾರದ ಈ ನಿರ್ಧಾರದಿಂದ ನಮ್ಮ ಶಿಕ್ಷಣ ಸಂಸ್ಥೆಯ ಶಾಲಾ ಶುಲ್ಕ ಸಂಗ್ರಹದಲ್ಲಿ ತೀವ್ರ ಹಿನ್ನಡೆಯಾಗಿದ್ದು, ಸರಿಸುಮಾರು 6 ಕೋಟಿ ರೂ.ಗಳಷ್ಟು ಶುಲ್ಕ ಬಾಕಿ ಇರುತ್ತದೆ. ಕೋವಿಡ್‌ನಿಂದಾಗಿ ಹೆಚ್ಚಿನ ಸದಸ್ಯರು ಆರ್ಥಿಕವಾಗಿ ತೊಂದರೆಯಲ್ಲಿರುವುದರಿಂದ ದೇಣಿಗೆ ಕೇಳದೇ ಯೋಜನೆಯನ್ನು ಪೂರ್ಣಗೊಳಿಸುವ ಆಶಯವನ್ನು ನಮ್ಮ ಸಮಿತಿಯು ಹೊಂದಿದ್ದರೂ, ಶಾಲಾ ಶುಲ್ಕ ಸಂಗ್ರಹದಲ್ಲಿ ಹಿನ್ನಡೆಯಾಗಿದ್ದರಿಂದ ಸದಸ್ಯರಿಂದ ದೇಣಿಗೆ ಸಂಗ್ರಹಿಸುವ ಅನಿವಾರ್ಯತೆ ಎದುರಾಗಿದೆ. ಆದ್ದರಿಂದ, 'ಹನಿ-ಹನಿ ಕೂಡಿ ಹಳ್ಳ' ಎನ್ನುವ ನಾಣ್ಣುಡಿಯಂತೆ ಸಹೃದಯರಾದ ತಾವೆಲ್ಲರೂ ತನು-ಮನ-ಧನದ ಸಹಕಾರ ನೀಡಿ ಯೋಜನೆ ಯಶಸ್ವಿಗೊಳಿಸಲು ಸಹಕರಿಸಬೇಕಾಗಿ ವಿನಂತಿ. ಈ ಬಗ್ಗೆ ಪ್ರತ್ಯೇಕ ಮನವಿಯನ್ನು ಸಂಪೂರ್ಣ ವಿವರಗಳೊಂದಿಗೆ ಶೀಘ್ರದಲ್ಲಿ ತಮಗೆ ಕಳುಹಿಸಲಿದ್ದು, ತಾವೆಲ್ಲರೂ ಸಕಾರಾತ್ಮಕವಾಗಿ ಸ್ಪಂದಿಸಬೇಕಾಗಿ ವಿನಂತಿ.

ಈ ಸಂದರ್ಭದಲ್ಲಿ ಯೋಜನಾ ಸಮಿತಿಯ ಚೇರ್‌ಮೆನ್ ಶ್ರೀ ಕೆ. ಪ್ರಕಾಶ್ ಶೆಟ್ಟಿಯವರು ಒಂದು ಕೋಟಿ ರೂ.ಗಳ ಉದಾರ ದೇಣಿಗೆಯನ್ನು ನೀಡಿರುವುದು ಅಭಿನಂದನಾರ್ಹ. ಸ್ವಯಂ ಪ್ರೇರಿತರಾಗಿ ನಮ್ಮ ನಿರೀಕ್ಷೆಗೂ ಮೀರಿ ಸ್ವ-ಇಚ್ಛೆಯಿಂದ ದೇಣಿಗೆ ನೀಡಿರುವ ಎಲ್ಲಾ ದಾನಿಗಳಿಗೆ ನಾವು ಅಭಾರಿಯಾಗಿದ್ದೇವೆ.

ನಮ್ಮ ನೂತನ ಶೈಕ್ಷಣಿಕ ಸಂಸ್ಥೆ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-II ರಲ್ಲಿ 2021ನೇ ಶೈಕ್ಷಣಿಕ ಸಾಲಿನಿಂದ ತರಗತಿಗಳನ್ನು ಪ್ರಾರಂಭಿಸಲು ಕರ್ನಾಟಕ ಸರಕಾರದ ಶಿಕ್ಷಣ ಇಲಾಖೆಯಿಂದ ಅನುಮತಿ ದೊರಕಿದೆ ಎಂದು ತಿಳಿಸಲು ಹರ್ಷಿಸುತ್ತಿದ್ದೇವೆ.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

ಸದಸ್ಯ ಬಾಂಧವರು ಚೆಕ್/ ಬ್ಯಾಂಕ್ ಟ್ರಾನ್ಸ್‌ಫರ್ ಮೂಲಕ ತಮ್ಮ ದೇಣಿಗೆಯನ್ನು ನೀಡಬಹುದಾಗಿದ್ದು, ಪಾವತಿಯ ವಿವರಗಳನ್ನು ಮೊ.ಸಂಖ್ಯೆ: 7022119739 ಗೆ ಕಳುಹಿಸಬಹುದಾಗಿದೆ.

Bank A/c details:
**BUNTS SANGHA BANGALORE BUILDING FUND A/C**
S.B. A/C No. 89450100019122, IFSC CODE - BARB0VJVIJB
'BANK OF BARODA, VIJAYANAGAR BRANCH, BANGALORE,

ವಿ.ಸೂ: ದಾನಿಗಳು ತಮ್ಮ ಸ್ವಇಚ್ಛೆಯಿಂದ ಯಾವುದೇ ಮೊತ್ತದ ದೇಣಿಗೆ ನೀಡಿದರೂ, ಅದನ್ನು ಗೌರವಪೂರ್ವಕವಾಗಿ ಸ್ವೀಕರಿಸಲಾಗುವುದು.

# ಗೌರವ ಕಾರ್ಯದರ್ಶಿಗಳ ವರದಿ



ಓಂ ಶ್ರೀ ಗುರುಭ್ಯೋ ನಮಃ

ಆತ್ಮೀಯ ಬಂಧುಗಳೇ,

ಬಂಟರ ಸಂಘದ ಆರ್.ಎನ್.ಎಸ್ ವಿದ್ಯಾನಿಕೇತ –II, ಯಲಚಗುಪ್ಪೆಯಲ್ಲಿ ಶಾಲೆಯ ಕಟ್ಟಡದ ಕೆಲಸ ಬಹಳ ಬಿರುಸಾಗಿ ನಡೆಯುತ್ತಿದೆ. ಈಗಾಗಲೇ ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲೆಯನ್ನು ಪ್ರಾರಂಭಿಸುವುದಾಗಿ ನಿಶ್ಚಯಿಸಲಾಗಿದೆ. ಸುಮಾರು ಮೇ ಮೂರನೇ ವಾರದಲ್ಲಿ ಶಾಲೆಯ ಉದ್ಘಾಟನೆ ಮಾಡುವ ತಯಾರಿ ನಡೆಯುತ್ತಿದೆ.

ಮಾಂಟೆಸರಿಯಿಂದ 4ನೇ ತರಗತಿ ಹಾಗೂ ಪ್ರಥಮ ಪಿ.ಯು.ಸಿ ಪ್ರವೇಶ (Admission) ಪ್ರಾರಂಭವಾಗಿದೆ. ಸುತ್ತಮುತ್ತಲಿನ ಜನರಿಗೆ ಶಾಲೆಯ ಬಗ್ಗೆ ಅರಿವನ್ನು ಮೂಡಿಸುವ ಕೆಲಸವನ್ನು ಶಾಲೆಯ ಶಿಕ್ಷಕ ಶಿಕ್ಷಕಿಯರು ಬಹಳಷ್ಟು ಶ್ರಮ ವಹಿಸಿ ಮನೆ ಮನೆಗೆ, ಗ್ರಾಮಗಳಿಗೆ ತೆರಳಿ ನಮ್ಮ ವಿದ್ಯಾಸಂಸ್ಥೆಯ ಸಾಧನೆಯನ್ನು ಪೋಷಕರಿಗೆ ಮನದಟ್ಟು ಮಾಡಿಕೊಡುತ್ತಿದ್ದಾರೆ. ಅದಕ್ಕಾಗಿಯೇ ಒಂದು ಪ್ರಚಾರ ಸಮಿತಿ (Marketing Team) ಮಾಡಲಾಗಿದ್ದು ಅದರ ಸಂಪೂರ್ಣ ಜವಾಬ್ದಾರಿಯನ್ನು ಸಂಘದ ಉದ್ಯೋಗ ಮಾಹಿತಿ ಮತ್ತು ಮಾನವ ಸಂಪನ್ಮೂಲ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಸುರೇಖಾ ಶೆಟ್ಟಿಯವರು ವಹಿಸಿಕೊಂಡಿದ್ದು, ವಿದ್ಯಾಕ್ಷೇತ್ರದ ತಮ್ಮ ಸಂಪೂರ್ಣ ಅನುಭವವನ್ನು ಇಲ್ಲಿ ತೊಡಗಿಸಿದ್ದಾರೆ. ಎಲ್ಲಾ ಶಾಲೆಯ ಸಿಬ್ಬಂದಿಯವರನ್ನು ಸೇರಿಸಿಕೊಂಡು ಒಂದು ತಂಡವಾಗಿ ಕೆಲಸ ಮಾಡುತ್ತಿದ್ದಾರೆ. ಪ್ರತಿ ದಿನವೂ ನಮ್ಮ ಸಂಘದ ಅನೇಕ ಸದಸ್ಯರು ನಮ್ಮ ಕಾರ್ಯಕಾರಿ ಸಮಿತಿ ಸದಸ್ಯರ ಜೊತೆಗೆ ಯಲಚಗುಪ್ಪೆಯ ಹೊಸ ಶಾಲೆಗೆ ಭೇಟಿ ಕೊಡುತ್ತಿದ್ದು, ಶಾಲೆಯ ಕೆಲಸದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದಾರೆ.

ಇನ್ನೊಂದು ತಿಂಗಳಲ್ಲಿ ಶಾಲೆಯ ಸಂಪೂರ್ಣ ಕೆಲಸವನ್ನು ಮುಗಿಸಬೇಕಾಗಿರುವುದು ನಮ್ಮೆಲ್ಲರ ಹೊಣೆ. ಬಹಳ ಮುಖ್ಯವಾಗಿ ಈಗ ನಮಗೆ ಹಣದ ಅವಶ್ಯಕತೆ ಇದೆ. ಸಹೃದಯಿಗಳು ನಮ್ಮ ಮನವಿಯ ಮೇರೆಗೆ ಈ ಯೋಜನೆಗೆ ದೇಣಿಗೆ ನೀಡುತ್ತಿದ್ದಾರೆ.

ಇದು ಬಹಳ ಪುಣ್ಯದ ಕೆಲಸವಾದ್ದರಿಂದ ಸಂಘದ ಸದಸ್ಯರಾದ ಹಾಗೂ ದಾನಿಗಳಾದ ತಾವೆಲ್ಲಾ ತಮ್ಮ ಕೈಲಾದ ಆರ್ಥಿಕ ಸಹಾಯವನ್ನು ಸಂಘದ ಶಾಲೆಯ ಕೆಲಸಕ್ಕೆ ನೀಡುವುದರ ಮೂಲಕ ಮುಂದಿನ ಅದೆಷ್ಟೋ ವಿದ್ಯಾರ್ಥಿಗಳ ಜೀವನಕ್ಕೆ ತಾವು ವಿದ್ಯಾದಾನ ಮಾಡಿ ಅವರ ಬದುಕನ್ನು ಬೆಳಗಲು ಪ್ರಸನ್ನರಾಗಬೇಕೆಂದು ಸಂಘದ ಪರವಾಗಿ ಹೃದ್ಯ ಪ್ರಾರ್ಥನೆ. ಆರ್ಥಿಕ ನೆರವನ್ನು ನೀಡಿದ ಪ್ರತಿಯೊಬ್ಬರನ್ನು ವಿಶೇಷ ರೀತಿಯಲ್ಲಿ ಗೌರವಿಸಲಾಗುವುದು.

ಸನ್ಮಾನ್ಯ ಸದಸ್ಯರಾದ ತಾವೆಲ್ಲ ಖುದ್ದಾಗಿ ಅಥವಾ ಸಂಘದ ಬ್ಯಾಂಕ್ ಖಾತೆಗೆ ಹಣವನ್ನು ನೀಡಿ, ತಮ್ಮ ಬಂಧುಗಳು, ಸ್ನೇಹಿತರಿಂದಲೂ ಒಂದಷ್ಟು ಧನವನ್ನು ಶೇಖರಿಸಿಕೊಡಬೇಕಾಗಿ ವಿನಂತಿ. ತಮ್ಮ ಅಮೂಲ್ಯ ಸಮಯದಲ್ಲಿ ಒಂದಷ್ಟು ಸಮಯವನ್ನು ಇದಕ್ಕಾಗಿ ಮೀಸಲಿಡಬೇಕಾಗಿ ತಮ್ಮಲ್ಲಿ ವಿನಮ್ರ ವಿನಂತಿ.

ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜ್ ವತಿಯಿಂದ ದಿನಾಂಕ 28.02.2021ರಂದು ಡೆಮೋನ್ಸ್ ಆನ್ ತ್ರೋಟಲ್, ರೈಡರ್ಸ್ ಆಫ್ ತುಮಕೂರು, ಬಂಟರ ಸಂಘದ ಯುವ ವಿಭಾಗ ಮತ್ತು ಸಂತೋಷ್ ಜಿಮ್ ತಂಡದ ಸಹಯೋಗದಲ್ಲಿ ಶಿಕ್ಷಣದ ಮಹತ್ವದ ಅರಿವು ಮೂಡಿಸುವ ನಿಟ್ಟಿನಲ್ಲಿ ಮೆಗಾ ಬೈಕ್ ರ‍್ಯಾಲಿ – "ಉಜ್ವಲ ಭವಿಷ್ಯವನ್ನು ಬೆಳಗಿಸಿ" ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಶ್ರೀ ಭಾಸ್ಕರ್ ರಾವ್, ಐಪಿಎಸ್, ಎ.ಜಿ.ಡಿ.ಪಿ, ರೈಲ್ವೇಸ್, ಅರ್ಜುನ್ ಪ್ರಶಸ್ತಿ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಅಂತರಾಷ್ಟ್ರೀಯ ಪ್ಯಾರಾ ಓಲಂಪಿಕ್ ಕ್ರೀಡಾಪಟು ಶ್ರೀಮತಿ ಮಾಲತಿ ಕೃಷ್ಣಮೂರ್ತಿ ಹೊಳ್ಳ, ಏಷ್ಯಾದಲ್ಲೇ ಬಲಿಷ್ಠವ್ಯಕ್ತಿ ಎಂದು ಗುರುತಿಸಿಕೊಂಡಿರುವ ಶ್ರೀ ಮನೋಜ್ ಕುಮಾರ ಭಾಗವಹಿಸಿ ಬೈಕ್ ರ‍್ಯಾಲಿಗೆ ಚಾಲನೆ ನೀಡಿದರು. ರ‍್ಯಾಲಿಯಲ್ಲಿ ಸುಮಾರು 100ಕ್ಕೂ ಅಧಿಕ ಬೈಕ್ ಸವಾರರು ಭಾಗವಹಿಸಿದ್ದರು.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ತಾಂಬೂಲ ಅಥವಾ ವೀಳ್ಯದೆಲೆಯ ಮಹತ್ವ



**ಕೆ. ನಾಗರಾಜ ಶೆಟ್ಟಿ,**
**ಕುಕ್ಕುಡೆಮನೆ**

ಸಾಮಾನ್ಯವಾಗಿ ಮಧ್ಯವಯಸ್ಕರಿಂದ ಮೇಲ್ಪಟ್ಟು ಪುರುಷರು ಹಾಗೂ ಮಹಿಳೆಯರು ಊಟವಾದ ಬಳಿಕ ಅಥವಾ ಮನಸ್ಸು ಬಂದಾಗ ತಿನ್ನುವ ಅಂದರೆ ಉಪಯೋಗಿಸುವ ಒಂದು ಸಾಧನವೇ ತಾಂಬೂಲ ಅಥವಾ ವೀಳ್ಯದೆಲೆ.

ಶುಭ ಸಮಾರಂಭಗಳಿಗೆ, ಮನೆಗಳಿಗೆ ಬಂದ ಅತಿಥಿ ಅಭ್ಯಾಗತರಿಗೆ ಅಥವಾ ಹಿರಿಯರಿಗೆ ಊಟವಾದ ಬಳಿಕ ತಾಂಬೂಲ ಅಂದರೆ ವೀಳ್ಯದೆಲೆ-ಅಡಿಕೆ ಕೊಡುವುದು ಅನಾದಿ ಕಾಲದಿಂದ ಬೆಳೆದು ಬಂದ ಸಂಪ್ರದಾಯ. ಇದು ಕೊಡುವುದು, ತೆಗೆದುಕೊಳ್ಳುವುದು ಅನ್ನುವುದಕ್ಕಿಂತ ಒಂದು ಗಟ್ಟಿ ಬಾಂಧವ್ಯದ ಪ್ರತೀಕವಾಗಿ ಇದನ್ನು ಆಚರಿಸಿಕೊಂಡು ಬರುತ್ತಿದ್ದೇವೆ. ಆದರೆ ಇಂದಿನ ಆಧುನೀಕತೆಯ ಭರದಲ್ಲಿ 'ತಾಂಬೂಲ ಶಾಸ್ತ್ರ' ಒಂದು ಶೋಕಿಯಾಗುತ್ತಿದೆ ಎಂಬುದು ಅತ್ಯಂತ ಆತಂಕದ ವಿಚಾರ. ನೈಜ ಅಡಿಕೆಯನ್ನು ಬದಿಗೊತ್ತಿ ಪರಿಮಳ ದ್ರವ್ಯ ಬೆರೆಸಿದ ಪುಡಿ ಪುಡಿ ಅಡಿಕೆಯನ್ನು ಪ್ಯಾಕೆಟ್ ಒಳಗೆ ಹಾಕಿ ನೀಡುತ್ತಿರುವುದು ಯಾವ ಸಂಪ್ರದಾಯ ಅನ್ನುವುದೇ ಪ್ರಶ್ನೆ? ಈ ತಾಂಬೂಲದ ಹಿಂದೆ ಉತ್ತಮ ಆಶಯ ಅಭಿಲಾಷೆ ಇದೆ. ಇದು ಸಂಸ್ಕೃತಿ, ಪದ್ಧತಿ, ಸಂಪ್ರದಾಯದ ಪ್ರತೀಕವಾಗಿರುವ ವಸ್ತುವಾಗಿ ನಮಗೆ ಆಚರಣೆಯಲ್ಲಿದೆ.

ಎಲೆ-ಅಡಿಕೆ-ಸುಣ್ಣ ಸೇರಿದಾಗ ತಾಂಬೂಲವಾಗುತ್ತದೆ. ಈ ತಾಂಬೂಲಕ್ಕೆ ತನ್ನದೇ ಆದ ದೊಡ್ಡ ಗೌರವದ ಸ್ಥಾನವಿದೆ. ಅನಾದಿಕಾಲದಿಂದಲೂ ತಾಂಬೂಲದ ಜೊತೆಯಲ್ಲಿ ಹಣ್ಣು ಕಾಯಿಗಳನ್ನು ದೇವರಿಗೆ ಸಮರ್ಪಣೆ ಮಾಡುವುದು ಸಾಂಪ್ರದಾಯಿಕವಾಗಿ ಬಂದಿದೆ. ಇನ್ನೊಂದು ಅರ್ಥದಲ್ಲಿ ವೀಳ್ಯ ಕೊಡುವುದು ಅಂದರೆ ಪಂಥಾಹ್ವಾನ ಅಥವಾ ಸಮರಾಭ್ಯಾಸಕ್ಕೆ ಕರೆಯುವುದು ಅನ್ನುವ ವಿಶ್ಲೇಷಣೆ ಕೂಡಾ ಇದೆ. ಮನೆಗೆ ಬಂದ ಮುತ್ತೈದೆಯರಿಗೆ ಕುಂಕುಮ, ಜೊತೆಗೆ ತಾಂಬೂಲದ ಜೊತೆಯಲ್ಲಿ ಕಲ್ಲುಸಕ್ಕರೆ, ಬೆಲ್ಲ, ಹಣ್ಣು-ಕಾಯಿ ಕೊಡುವುದು ಪದ್ಧತಿ. ಇನ್ನೊಂದು ಆಚರಣೆ ರೂಪದಲ್ಲಿ ಮನೆಗೆ ಬಂದವರನ್ನು ಬರೀ ಕೈಯಲ್ಲಿ ಕಳಿಸುವುದು ಸರಿಯಲ್ಲ ಎಂಬ ಕಾರಣಕ್ಕೆ ಈ ಸಂಪ್ರದಾಯ ಬೆಳೆದು ಬಂದಿರಬಹುದು ಅನ್ನುವ ಊಹೆ ಇದೆ.

ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲಿ ಮಧ್ಯಾಹ್ನ ಊಟವಾದ ಮೇಲೆ ಎಲೆ ಅಡಿಕೆ ಹಾಕಿಕೊಳ್ಳುವುದು ಪದ್ಧತಿ. ಅದರಲ್ಲೂ ಹಳ್ಳಿ ಜೀವನದಲ್ಲಿ ಇಂದಿಗೂ ಚಾಲ್ತಿಯಲ್ಲಿದೆ. ಇಂದು ಹಳ್ಳಿಗಳಲ್ಲಿರುವ ಮನೆಗಳ ಒಂದು ಮೂಲೆಯಲ್ಲಿ ಅಡಿಕೆ ಕುಟ್ಟುವ ಕಲ್ಲು, ವೀಳ್ಯದೆಲೆ, ತಂಬಾಕು, ಸುಣ್ಣದ ಡಬ್ಬಿ ಮುಂತಾದವುಗಳು ಇರುವ ತಟ್ಟೆ ಅಂದರೆ ಹರಿವಾಣ ಕಾಣಸಿಗುತ್ತದೆ. ಎಲೆಯನ್ನು ಚೆನ್ನಾಗಿ ಒರೆಸಿ ನಾರು ತೆಗೆದು ಅದಕ್ಕೆ ಹಿಂಭಾಗದಲ್ಲಿ ಒಳ್ಳೆ ಸುವಾಸನೆಯ ಸುಣ್ಣ ಹಚ್ಚಿ ಸುಗಂಧದ ಅಡಿಕೆ ಪುಡಿ ಇಟ್ಟು ಮಡಿಸಿ ಹೆಂಡತಿ ಗಂಡನ ಕೈಗೆ ಕೊಟ್ಟಾಗ ಆ ಮೈಸೂರಿನ ಚಿಗುರೆಲೆ, ಬನಾರಸ್ ಅಥವಾ ಕೋಲ್ಕತ್ತಾ ಎಲೆಗಳು ಎಷ್ಟು ತಿಂದರೂ ಸಾಲದು ಎಂಬಂತೆ ಸಂತೋಷ.

ಈ ಎಲೆ ಅಡಿಕೆ ಸುಣ್ಣದ ಮಿಶ್ರಣದಿಂದ ತಿಂದ ಆಹಾರ ಚೆನ್ನಾಗಿ ಪಚನವಾಗುತ್ತದೆ ಮತ್ತು ಜೀರ್ಣಶಕ್ತಿ ಹೆಚ್ಚಾಗುತ್ತದೆ ಎಂಬ ನಂಬಿಕೆ ಮೊದಲಿನಿಂದಲೂ ಇದೆ. ಅದಕ್ಕೆ ವಿಶೇಷ ಭೋಜನದ ನಂತರ ಅದರಲ್ಲೂ ಮಾಂಸಾಹಾರಿ ಭೋಜನದ ನಂತರ ವೀಳ್ಯದೆಲೆ ತಿನ್ನುವುದು ರೂಢಿಯಾಗಿ ಬೆಳೆದುಕೊಂಡು ಬಂದಿದೆ. ಇದರ ಇನ್ನೊಂದು ವಿಶೇಷ ಬಾಯಿಯ ದುರ್ಗಂಧ ವಾಸನೆ ದೂರ ಮಾಡುವುದು. ಸುಣ್ಣದಲ್ಲಿ ಕ್ಯಾಲ್ಸಿಯಮ್ ಅಂಶ ಇದೆ ಅನ್ನುವುದು ಎಲ್ಲರಿಗೂ ತಿಳಿದ ವಿಚಾರ. ಇದೂ ಸಹ ನಮ್ಮ ದೇಹಕ್ಕೆ ಬೇಕು. ಆದ್ದರಿಂದ ಈ ಎಲ್ಲಾ ಔಷಧಿ ಗುಣಗಳಿಂದ ಕೂಡಿದ ತಾಂಬೂಲದ ಮಹತ್ವ ಎಷ್ಟು ಹೇಳಿದರೂ ಕಡಿಮೆಯೇ. ಬಾಣಂತಿಯರಿಗೆ ಊಟವಾದ ಕೂಡಲೇ ಎಲೆ ಅಡಿಕೆ ಹಾಕಿದ ನಂತರವೇ

ಮಗುವಿಗೆ ಹಾಲು ಕುಡಿಸುತ್ತಿದ್ದರು. ಇದಕ್ಕೆ ಕಾರಣ ತಾಯಿಯ ಹಾಲಿನಿಂದ ಕ್ಯಾಲ್ಸಿಯಮ್ ಗುಣಗಳು ಸಿಕ್ಕಿ ಮಕ್ಕಳು ಬೆಳೆಯುವಾಗಲೇ ಮೂಳೆಗಳು ಗಟ್ಟಿಯಾಗಿ ಬೆಳೆಯುತ್ತದೆ ಅನ್ನುವ ನಂಬಿಕೆ ಪ್ರಚಲಿತದಲ್ಲಿದೆ. ಅಲ್ಲದೆ ಇದು ಸಣ್ಣ-ಪುಟ್ಟ ರೋಗಗಳಿಗೆ ಕೂಡಾ ದಿವ್ಯ ಶಕ್ತಿಯಾಗಿದೆ.

ವೀಳ್ಯದೆಲೆಯಲ್ಲಿ ಔಷಧಿ ಗುಣಗಳು ಸಾಕಷ್ಟು ಇದೆ. ಕೆಮ್ಮು ಬಂದಾಗ ವೀಳ್ಯದೆಲೆ ರಸ ತೆಗೆದು ಅದಕ್ಕೆ ತುಳಸಿರಸ ಹಾಗೂ ಜೇನುತುಪ್ಪ ಸೇರಿಸಿ ಮಕ್ಕಳಿಗೆ ಕೊಟ್ಟಲ್ಲಿ ಕೆಮ್ಮು ಬೇಗ ಗುಣವಾಗುತ್ತದೆ. ಸಣ್ಣ ಮಕ್ಕಳಿಗೆ ಹೊಟ್ಟೆನೋವು ಬಂದಾಗ ಈ ಎಲೆಗೆ ಹರಳೆಣ್ಣೆ ಬಿಸಿಮಾಡಿ ಹಚ್ಚಿ ಅದನ್ನು ಮಕ್ಕಳ ಹೊಕ್ಕಳು ಸುತ್ತಲೂ ಇಟ್ಟು ಕಾವು ಕೊಟ್ಟಾಗ ಹೊಟ್ಟೆ ನೋವು ಕಡಿಮೆ ಆಗುತ್ತದೆ ಅನ್ನುವ ನಂಬಿಕೆ ಇದೆ.

ದೊಡ್ಡವರು ಸಹ ಎಲೆಯಲ್ಲಿ 4 ಹರಳು ಉಪ್ಪುಕಾಳು, 4 ಕಾಳು ಕರಿ ಮೆಣಸು ಇಟ್ಟು ಎಲೆಯನ್ನು ಮಡಿಸಿ ಬಾಯಲ್ಲಿಟ್ಟುಕೊಂಡು ಅದರ ರಸವನ್ನು ಕುಡಿದರೆ ಆರಾಮವಾಗುತ್ತದೆ ಅನ್ನುವುದು ನಂಬಿಕೆ. ಚಿಕ್ಕ ಹುಡುಗರಿಗಾದರೆ ಲವಂಗ ಮತ್ತು ಕೆಂಪು ಕಲ್ಲು ಸಕ್ಕರೆ ತುಂಡು ಇಟ್ಟು ಕೊಡಬೇಕು. ಒಟ್ಟಾರೆ ಈ ತಾಂಬೂಲಕ್ಕೆ ಹಲವು ಉಪಶಮನ ಗುಣಗಳಿವೆ.

ವೀಳ್ಯದೆಲೆ ನಮ್ಮ ನಂಬಿಕೆ, ವಿಶ್ವಾಸ ಹಾಗೂ ಸಂಬಂಧ ಬೆಸೆಯುವ ಪ್ರತೀಕವೂ ಹೌದು. ವೀಳ್ಯದೆಲೆ ಎಂದರೆ ಲಕ್ಷ್ಮೀ ಎಂತಲೂ ಹೇಳುತ್ತಾರೆ. ಎಲೆಯನ್ನು ತಟ್ಟೆಯಲ್ಲಿಟ್ಟು ಕೊಡುವುದು ನಮ್ಮ ಸಂಸ್ಕೃತಿ, ಅದನ್ನು ಯಾವಾಗಲೂ ಬೋರಲಾಗಿ ಬೀಳಿಸಬಾರದು ಅನ್ನುತ್ತಾರೆ. ಯಾವಾಗಲೂ ಸರಿಸಮ ಪ್ರಮಾಣದಲ್ಲಿ ಎಲೆಗಳನ್ನು ಕೊಡಬೇಕು. ಕಳಸ ಪೂಜೆಗೆ ಸಾಮಾನ್ಯವಾಗಿ 4 ಎಲೆಗಳನ್ನು ಇಡುತ್ತಾರೆ.

ಇನ್ನು ಗಂಡು-ಹೆಣ್ಣು ಒಪ್ಪಿ ಮದುವೆಯ ಮಾತನಾಡುವಾಗ ತಾಂಬೂಲ ಬದಲಾವಣೆ ಮಾಡಿಕೊಳ್ಳುತ್ತಾರೆ. ಇದರಲ್ಲೂ ಒಂದು ಕ್ರಮ ಇದೆ. ಗಂಡಿನ ಕಡೆಯವರು ಮತ್ತು ಹೆಣ್ಣಿನ ಕಡೆಯವರು ತಟ್ಟೆಯಲ್ಲಿ 25 ಎಲೆಗಳು, ಅದರ ಜೊತೆಯಲ್ಲಿ ಅಡಿಕೆ 50 ಗ್ರಾಂ, ನಂತರ 5 ತರಹದ ಹಣ್ಣುಗಳು ಮತ್ತು ತೆಂಗಿನಕಾಯಿ ಇವುಗಳನ್ನು ಇಟ್ಟು ಎರಡೂ ಕಡೆಯಿಂದಲೂ ಮದುವೆಗೆ ಒಪ್ಪಿಗೆ ಕೊಟ್ಟಾಯಿತು ಎಂಬ ಮಾತಿನ ಶಾಸ್ತ್ರ ಮಾಡಿ ತಾಂಬೂಲದ ಬದಲಾವಣೆ ಮಾಡುವುದು ಒಂದು ಸಂಪ್ರದಾಯವಾಗಿ ಬೆಳೆದು ಬಂದಿದೆ. ಮದುವೆ, ಮುಂಜಿ, ಗೃಹಪ್ರವೇಶ, ಶಾಂತಿ ಹೋಮ - ಹವನ ಹಾಗೂ ಸಾಕಷ್ಟು ದೈವಿಕ ಕಾರ್ಯಕ್ರಮಗಳಲ್ಲಿ ಈ ತಾಂಬೂಲಕ್ಕೆ ವಿಶೇಷ ಮಹತ್ವ ಇದೆ.

ಇಂದಿಗೂ ಹಳ್ಳಿ ಹಳ್ಳಿಗಳಲ್ಲಿ ವೀಳ್ಯದೆಲೆ, ಅಡಿಕೆ, ಸುಣ್ಣದೊಂದಿಗೆ ಹೊಗೆಸೊಪ್ಪನ್ನು ಅಜ್ಜ-ಅಜ್ಜಿಯಂದಿರು ಹೆಚ್ಚಾಗಿ ಉಪಯೋಗಿಸುವುದನ್ನು ನಾವು ನೋಡುತ್ತಿದ್ದೇವೆ. ಹೊಗೆಸೊಪ್ಪು ಆರೋಗ್ಯಕ್ಕೆ ಹಾನಿಕರ ಅಂತ ಗೊತ್ತಿದ್ದರೂ ಅದ್ಯಾವುದೋ ರುಚಿಯ ಸ್ವಾದಕ್ಕೆ ಅಭ್ಯಾಸಕ್ಕೆ ಕಟ್ಟು ಬಿದ್ದಿರುವುದು ಕಂಡು ಬರುತ್ತದೆ. ಕೆಲವರು ಊಟವನ್ನು ಬೇಕಾದರೂ ಬಿಡ್ತಾರೆ, ಆದರೆ ವೀಳ್ಯದೆಲೆ ತಿನ್ನುವುದನ್ನು ಬಿಡುವುದಿಲ್ಲ. ಅಷ್ಟು ಒಗ್ಗಿ ಹೋಗಿದ್ದಾರೆ ಜನ ಇದಕ್ಕೆ. ಕೆಲವರು ಇದನ್ನು ಸಮಯ ಕಳೆಯಲು, ಕೆಲವರು ಅಭ್ಯಾಸ ಬಲಕ್ಕೆ, ಇನ್ನು ಕೆಲವರು ಆರೋಗ್ಯಕ್ಕೆ ಅಂತ ಹೀಗೆ ನಾನಾ ಕಾರಣಗಳಿಂದ ಇದನ್ನು ಬಳಸುತ್ತಾರೆ.

ವೀಳ್ಯದೆಲೆ ದಿನದಲ್ಲಿ ಒಮ್ಮೆಯಾದರೂ, ಅದರಲ್ಲೂ ರಾತ್ರಿ ಊಟದ ನಂತರ ತಿನ್ನದಿದ್ದರೆ ರಾತ್ರಿ ನಿದ್ದೆಯೇ ಬರದೇ ಪರದಾಡುವುದನ್ನು ನಾವು ಕಂಡಿದ್ದೇವೆ. ಅಷ್ಟರ ಮಟ್ಟಿಗೆ ಇದರ ಉಪಯುಕ್ತತೆ ಜನರ ಪ್ರೀತಿಗೆ ಪಾತ್ರವಾಗಿದೆ ಅಂತ ಹೇಳಬಹುದು.


ಮಹಾಭಾರತ ಯುದ್ಧದಲ್ಲಿ ಭೀಮ ಮತ್ತು ದುರ್ಯೋಧನರ ಯುದ್ಧದ ಸಂದರ್ಭದಲ್ಲಿ ಭೀಮನಿಗೆ ದುರ್ಯೋಧನನನ್ನು ಸೋಲಿಸಲು ಸಾಧ್ಯವಾಗದಿದ್ದಾಗ

(ತಾಯಿಯ ವರಪ್ರಸಾದದ ಕಾರಣ ದೇಹ ವಜ್ರಕಾಯವಾಗಿರುವುದರಿಂದ) ಕೃಷ್ಣ ಭೀಮನಿಗೆ ನೇರವಾಗಿ ಹೇಳದೇ ಸನ್ನೆಯ ಮುಖಾಂತರ ವೀಳ್ಯದೆಲೆಯನ್ನು ತೊಡೆಗೆ ಸವರಿಕೊಂಡು ತೊಡೆ ಮುರಿಯುವಂತೆ ತೋರಿಸುವುದು ಮತ್ತು ಇದನ್ನೇ ಭೀಮ ಗ್ರಹಿಸಿ ದುಯೋಧನನ ತೊಡೆಗೆ ಗದೆಯಿಂದ ಹೊಡೆದಾಗ ದುರ್ಯೋಧನನ ಅವಸಾನವಾಗುತ್ತದೆ ಅನ್ನುವುದು ಪೌರಾಣಿಕ ಹಿನ್ನೆಲೆ. ಅಂದರೆ ಮಹಾಭಾರತ ಯುದ್ಧದಲ್ಲೇ ಇದರ ಮಹತ್ವ ಸಾರಲಾಗಿದೆ. ಇದೇ ಕಾರಣಕ್ಕೋ ಏನೋ ಇಂದಿಗೂ ಕೆಲವರು ಎಲೆ ಅಡಿಕೆ ತಿನ್ನುವಾಗ ತೊಡೆಗೆ ಒರೆಸಿಕೊಂಡು ತಿನ್ನುವುದನ್ನು ನಾವು ನೋಡುತ್ತಿದ್ದೇವೆ. ಎಷ್ಟೊಂದು ಮಹತ್ವವಲ್ಲದೇ ಈ ವೀಳ್ಯದೆಲೆಗೆ. ಮಾನಸಿಕ ನೆಮ್ಮದಿಗಾಗಿ ಕೆಲವರು ವೀಳ್ಯದೆಲೆಯನ್ನು ಸವಿಯುವುದನ್ನು ನಾವು ಗಮನಿಸಬಹುದು. ಕಾಲ ಕಳೆದಂತೆ ಈ ವೀಳ್ಯದೆಲೆ ತಿನ್ನುವ ಸಂಪ್ರದಾಯದಲ್ಲಿ ಬದಲಾವಣೆ ಗಾಳಿ ಬೀಸುತ್ತಾ ಸಾಗುತ್ತಿದೆ. ಎಲ್ಲವೂ ಎಲ್ಲೆಡೆ ರೆಡಿಮೇಡ್ ಸಂಸ್ಕೃತಿ ದಾಳಿ ಇಡುತ್ತಿದೆ. ನಾವೂ ಒಪ್ಪಿಕೊಳ್ಳಬೇಕಾಗಿದೆ.

ಪ್ರತಿಯೊಬ್ಬ ಮನುಷ್ಯರಿಗೆ ಯಾವುದಾದರೊಂದು ಅಭ್ಯಾಸವೋ ದುರಭ್ಯಾಸವೋ ಇರಬೇಕು ಅನ್ನುವುದು ವಾಡಿಕೆ. ಅದಿಲ್ಲದಿದ್ದರೆ ಅವನು ಹುಚ್ಚನಂತಾಗುತ್ತಾನೆ ಅನ್ನುವುದು ಅನುಭವದ ಮಾತು. ಅದಕ್ಕೆ ಅಲ್ಲವೇ ಸಿಗರೇಟ್ ಸೇವನೆ ಸಾಮಾನ್ಯವಾಗಿ ಹಾನಿಕರ ಅಂತ ಗೊತ್ತಿದ್ದರೂ ಅದನ್ನು ಕಛೇರಿಗಳಲ್ಲಿ ಸಭೆ-ಸಮಾರಂಭಗಳಲ್ಲಿ ಉಪಯೋಗಿಸುತ್ತಿದ್ದಾರೆ. ನಮ್ಮ ಬೌದ್ಧಿಕ ಶಕ್ತಿ ವೃದ್ಧಿಯಾಗುತ್ತದೆ ಅಂತ ಕೆಲವರು ಹೇಳುವುದುಂಟು. ನೋಡಿ, ನಮ್ಮ ಖ್ಯಾತ ಸಾಹಿತಿಗಳನ್ನೇ ತೆಗೆದುಕೊಳ್ಳಿ, ಹೆಚ್ಚಿನವರು ವೀಳ್ಯದೆಲೆಯನ್ನು ಉಪಯೋಗಿಸುತ್ತಾರೆ. ಬದುಕಿನ ಮಜಲುಗಳನ್ನು ವಿಶ್ಲೇಶಿಸುತ್ತಾ ಹೋದರೆ ಒಂದಲ್ಲಾ ಒಂದು ಕಾರಣದಿಂದ ಒಂದೊಂದು ಅಭ್ಯಾಸಗಳು, ಕ್ರಮಗಳು ನಮ್ಮ ಬದುಕಿನ ದಾರಿಯಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿರುತ್ತವೆ. ಇದೇ ಅಲ್ಲವೇ ಬದುಕಿನ ಸೌಂದರ್ಯ, ಸಂಪ್ರದಾಯ, ಸಂಸ್ಕೃತಿಗಳ ಪ್ರತೀಕ. ಇದಕ್ಕೆ ಇನ್ನೂ ಬಡವ-ಬಲ್ಲಿದ ಅಂತ ಗಾಳಿ ಸೋಕದೇ ಇರುವುದು ಇದರ ಸ್ಥಾನಮಾನವನ್ನು ಇಂದಿಗೂ ಉಳಿಸಿಕೊಂಡು ಬಂದಿದೆ.

ಇನ್ನೊಂದು ಸಂಪ್ರದಾಯದಂತೆ ವೀಳ್ಯದೆಲೆಯನ್ನು ಪೂರ್ವ ಅಥವಾ ಉತ್ತರ ದಿಕ್ಕಿಗೆ ತುದಿ ಬರುವ ತರಹ ಇಟ್ಟು ದೇವರಿಗೆ ನೈವೇದ್ಯ ಮಾಡಬೇಕು. ಯಾರ ಮನೆಯಲ್ಲೇ ತಾಂಬೂಲ ಕೊಟ್ಟರೂ, ದೇವರ ಮುಂದೆ ಇಟ್ಟು ನಮಸ್ಕಾರ ಮಾಡಿ ಆ ನಂತರ ಉಪಯೋಗಿಸಬೇಕು. ಮಂಗಳವಾರ, ಶುಕ್ರವಾರಗಳಂದು ಯಾವುದೇ ಕಾರಣಕ್ಕೂ ವೀಳ್ಯದೆಲೆ ಹೊರಗೆ ಹಾಕಬಾರದು. ಹಸಿರಾಗಿರುವ ಮತ್ತು ಅಂದವಾಗಿ ಹಸ್ತದ ಆಕಾರ ಇರುವ ಎಳೆಯ ವೀಳ್ಯದೆಲೆ ನೈವೇದ್ಯ ಮಾಡಬೇಕು ಮತ್ತು ತಾಂಬೂಲ ಕೊಡಬೇಕು. ವೀಳ್ಯದೆಲೆಯ ಮಹತ್ವ ಏನೆಂದರೆ, ಎಲೆಯ ತುದಿಯಲ್ಲಿ ಲಕ್ಷ್ಮೀ, ಮಧ್ಯದಲ್ಲಿ ಸರಸ್ವತಿ ದೇವಿ, ಬಲಭಾಗದಲ್ಲಿ ಬ್ರಹ್ಮ ದೇವರು, ಎಡ ಭಾಗದಲ್ಲಿ ಪಾರ್ವತಿ ದೇವಿ, ಸಣ್ಣದಂಚಿನಲ್ಲಿ ಮಹಾವಿಷ್ಣುವಿನ ವಾಸ, ಹಿಂಭಾಗದಲ್ಲಿ ಚಂದ್ರನ ವಾಸ. ಎಲ್ಲಾ ಮೂಲೆಗಳಲ್ಲಿ ಪರಮೇಶ್ವರನ ವಾಸ, ಮಧ್ಯಭಾಗದ ನಂತರ ಮನ್ಮಥನ ವಾಸ, ಬುಡದಲ್ಲಿ ಮೃತ್ಯುದೇವತೆಯ ವಾಸ, ತೊಟ್ಟಿನಲ್ಲಿ ಅಹಂಕಾರ ದೇವತೆ ಹಾಗೂ ದಾರಿದ್ರ್ಯಲಕ್ಷ್ಮೀ ಇರುತ್ತಾರೆ. ಆದ್ದರಿಂದಲೇ ವೀಳ್ಯದೆಲೆ ಹಾಕಿಕೊಳ್ಳುವವರು ತೊಟ್ಟನ್ನು ಮುರಿದು ಹಾಕುತ್ತಾರೆ (ಈ ಕಾರಣಕ್ಕೆ ತಾಂಬೂಲ ಹಾಕಿಕೊಳ್ಳುವಾಗ ತುದಿ ಭಾಗ ಚಿವುಟಿ ಹಾಕುವುದು ಮತ್ತು ಅಹಂಕಾರ ಹಾಗೂ ದಾರಿದ್ರ್ಯಲಕ್ಷ್ಮೀ ಬರಬಾರದೆನ್ನುವುದು) ಒಟ್ಟಾರೆ ವೀಳ್ಯದೆಲೆ ಸರ್ವಋತುಗಳಲ್ಲಿ ಸರ್ವೇಸಾಮಾನ್ಯವಾಗಿ ಉಪಯುಕ್ತ-ವಾದ ಒಂದು ವಸ್ತುವಾಗಿ ಗುರುತಿಸಿಕೊಳ್ಳುತ್ತದೆ. ತಿನ್ನುವ, ಪೂಜಿಸುವ, ಅರ್ಪಿಸುವ, ಗೌರವಿಸುವ ಒಂದು ಅಪರೂಪದ ವಸ್ತು ಅಂದರೆ ವೀಳ್ಯದೆಲೆ ಅನ್ನುವುದು ಸಾರ್ವತ್ರಿಕ ಸತ್ಯ.

# ಶಿವರಾತ್ರಿ ಶಕ್ತಿ ಸಮೃದ್ಧಿಯ ದಿನ



ಭೋಜರಾಜ ಹೆಗ್ಡೆ
ಆತ್ರಾಡಿ

ಭಾರತೀಯರಾದ ನಾವು ಅತ್ಯಂತ ಶ್ರದ್ಧಾ ಭಕ್ತಿಯಿಂದಾಚರಿಸುವ ಮಹಾಶಿವರಾತ್ರಿಯ ಆಧ್ಯಾತ್ಮಿಕ ಹಿನ್ನಲೆ ಅರಿತುಕೊಳ್ಳದೆ ಹೋದರೆ ಮಾನವ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಘಟನೆಯೊಂದು ಅರಿವಿಲ್ಲದೆ, ಕೊನೆಗೆ ಪಶ್ಚಾತಾಪ ಪಡಬೇಕಾಗುತ್ತದೆ. ಅಜ್ಞಾನವೆಂಬ ಅಂಧಕಾರ ಸಮಾಪ್ತಿಯ ಪ್ರತಿಕಾರವೇ ಶಿವರಾತ್ರಿ. ಮನುಷ್ಯ ಜನ್ಮ ಸಾಫಲ್ಯ, ಕೇವಲ ಧರ್ಮಸಾಧನಮ್ ಎಂಬಂತೆ ನಮ್ಮ ಸಫಲತೆಯನ್ನು ಪಡೆಯುವುದು ಧರ್ಮಸಾಧನೆಯಿಂದ ಅರ್ಥಾತ್ ಧರ್ಮದ ಮರ್ಮವನ್ನು ತಿಳಿದು ಜೀವನದಲ್ಲಿ ಆಚರಣೆಯಲ್ಲಿ ತಂದುಕೊಂಡು ಬಾಳಬೇಕು, ಬದುಕಬೇಕು. ಪ್ರಜ್ಞಾಶಕ್ತಿ ಸರಿ ಇದ್ದರೆ ಮಾತ್ರ ಮನುಷ್ಯ ಮಾನವೀಯ ಧರ್ಮದೊಂದಿಗೆ ಬದುಕಿ ಬಾಳಲು ಸಾಧ್ಯ. ಪ್ರಪಂಚದಲ್ಲೇ ಧರ್ಮದ ಬೆನ್ನೆಲುಬು ಎಂದೆಣಿಸಲ್ಪಟ್ಟ ನಮ್ಮ ಈ ಭವ್ಯ ಭಾರತ ನಮ್ಮ ಹಬ್ಬಗಳ ವೈವಿಧ್ಯಮಯ ಆದರ್ಶನೀಯ, ಸದಾ ಅನುಕರಣೀಯ ಮತ್ತು ಸಾಫಲ್ಯಮಯವಾದದ್ದು. ಇವುಗಳ ಆಚರಣೆಯಲ್ಲಿ ಆಚಾರ, ವಿಚಾರ, ಸುಖ, ಸಂತೋಷವೂ ಕಂಡು ಬರುತ್ತದೆ. ಮಾತ್ರವಲ್ಲದೇ ಶಾಸ್ತ್ರೋಕ್ತವೂ ವೈಜ್ಞಾನಿಕವೂ ಆಗಿದೆ.

ಶಿವರಾತ್ರಿಯಂದು ಉಪವಾಸ, ಜಾಗರಣೆ ಧ್ಯಾನದಿಂದ ಮೋಕ್ಷ ಪ್ರಾಪ್ತಿ. ಶಿವ ಅಂದರೆ ಸರ್ವ ದೇವ ದಾನವ ಮಾನವರಿಂದ ಪೂಜಿಸಲ್ಪಡುವ ಪರಮಾತ್ಮ, ನಿರಾಕಾರ ಜ್ಯೋತಿರ್ಬಿಂದು ಸ್ವರೂಪದ ಮೃತ್ಯುಂಜಯ. ವಿಶ್ವದ ಈ ಭೂಮಿಯ ಮತ್ತು ವೇದಗಳ ಗರ್ಭಾಶಯ ಮತ್ತು ಸರ್ವ ಆತ್ಮದ ಪ್ರಭು ಶಿವ ಎಂದರ್ಥ. ಶಂಕರ ಅಂದರೆ, ಶಂ ಅಂದ್ರೆ ಒಳ್ಳೆಯದು, ಕರ ಅಂದರೆ ಮಾಡುವವನು ಎಂದರ್ಥ. ಶಿವ ಅಂದರೆ ಸದಾ ಕಲ್ಯಾಣಕಾರಿ, ಮಂಗಳಕಾರಿ, ಶುಭಕಾರಿ ಎಂದು. ದೇಹೋ ದೇವಾಲಯ, ಜೀವೋ ದೇವ ಸದಾಶಿವ ಎಂಬ ಮಾತು ವೇದಗಳಲ್ಲಿ ಬರುತ್ತವೆ. ನಮ್ಮ ಈ ದೇಹವೆಂಬ ಮನೆಯಲ್ಲಿ ದೇವರು ನೆಲಸಬೇಕಲ್ಲದೇ ದೆವ್ವಗಳು ನೆಲಸಬಾರದು. ಭಕ್ತ ಭಗವಂತನ ನಡುವೆ ಪವಿತ್ರ ಪ್ರೇಮ, ನಿರ್ಮಲ ಪ್ರೀತಿ ಎಂದು ಪ್ರಕಟಗೊಳ್ಳುತ್ತದೆ. ಓಂ ನಮೋ ಶಿವಾಯ ಮಂತ್ರವು ಓಂಕಾರದಿಂದ ಪ್ರಾರಂಭವಾಗುತ್ತದೆ. ಓಂ ಅನ್ನುವುದು ಮಹಾಬೀಜಾಕ್ಷರ, ಅದನ್ನೇ ಮತ್ತೆ ಮತ್ತೆ ಉಚ್ಚರಿಸುವುದರಿಂದ ಮಾನವನಲ್ಲಿ ತುಂಬಿರುವ ತಮೋಗುಣ, ರಜೋಗುಣಗಳೆರಡೂ ದೂರವಾಗಿ ನೀವು ನಂಬಿಕೊಂಡು ಪೂಜಿಸಿಕೊಂಡು ಬರುವ ದೇವರಿಂದ ದೈವಿಕ, ಅಧ್ಯಾತ್ಮಿಕ, ಧಾರ್ಮಿಕ ಸತ್ ಚಿಂತನೆ ಸತ್ ಪ್ರೇರಣೆಗಳು ಆಗುತ್ತಿರುತ್ತವೆ. ಶಿವರಾಧನೆ ವೇದಗಳ ಕಾಲದಿಂದಲೂ ರೂಢಿಯಲ್ಲಿತ್ತು. ಒಂದು ದಿನದ ಶಿವರಾತ್ರಿಯ ವ್ರತ, ಉಪವಾಸ, ಜಾಗರಣೆಗಳನ್ನು ಆಚರಿಸಿದರೆ ಸಾವಿರ ಏಕಾದಶಿ ವ್ರತಗಳನ್ನು ಆಚರಿಸಿದ ಪುಣ್ಯ ದೊರಕುತ್ತದೆ. ಮದುವೆಯಾಗದ ಹೆಣ್ಣುಮಕ್ಕಳು ಅನುರೂಪವಾದ ಪತಿಗಾಗಿ ಪ್ರಾರ್ಥಿಸಿದರೆ, ಮುತ್ತೈದೆಯರು ಪತಿಯ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥಿಸುವುದು ಸಂಪ್ರದಾಯ. ಶಿವಲಿಂಗದಿಂದ ಸತತ ತೇಜಸ್ಸು ಮತ್ತು ಶಕ್ತಿ ಹೊರಬೀಳುವುದರಿಂದ ಉಷ್ಣತೆಯನ್ನು ನಿಯಂತ್ರಿಸಲು ಲಿಂಗದ ಮೇಲೆ ಧಾರಾಪಾತ್ರೆಯನ್ನಿಟ್ಟು ನೀರು ತುಂಬಿಸುತ್ತಾರೆ. ಅದಕ್ಕೆ ಶಿವ ಅಭಿಷೇಕ ಪ್ರಿಯ ಎನ್ನುವುದು. ಶಿವನಿಗೆ ಬಿಲ್ವ ಪತ್ರೆ, ಎಕ್ಕಮಾಲೆ, ತುಂಬೆ ಹೂಗಳು ಬಲು ಇಷ್ಟ. ಬಿಲ್ವ ಪತ್ರೆಯ ಮೂರು ದಳದ ಎಲೆಗಳಲ್ಲಿ ಸತ್ವ, ರಜಸ್ಸು, ತಮಸ್ಸುಗಳೆಂಬ ಮೂರು

ಗುಣಗಳಿವೆ. ವ್ರತ, ಉಪವಾಸ, ಜಾಗರಣೆ, ಆಚರಿಸುವವರು ಶಿವರಾತ್ರಿಯಂದು ಬೆಳಿಗ್ಗೆಯಿಂದ ಮರುದಿನ ಬೆಳಿಗ್ಗೆ ಪೂಜೆ ಮುಗಿಯುವ ತನಕ ಹಾಲು, ಫಲವಸ್ತುಗಳನ್ನು ಬಿಟ್ಟು ಬೇಯಿಸಿದ ವಸ್ತುಗಳನ್ನು ತಿನ್ನಬಾರದು. ರಾತ್ರಿ–ಹಗಲು ಮಲಗಬಾರದು, ನಿದ್ದೆ ಮಾಡಬಾರದು. ರಾತ್ರಿ 12.00 ಗಂಟೆ ಪ್ರಶಸ್ತ ಸಮಯವಾದ್ದರಿಂದ ಪೂಜೆಗೆ ಕುಳಿತುಕೊಳ್ಳುವ ಮೊದಲು ಒಂದು ಹರಿವಾಣದಲ್ಲಿ ಶಿವ ಲಿಂಗವನ್ನಿಟ್ಟುಕೊಂಡು ಅದರ ಪಕ್ಕದಲ್ಲೇ ಒಂದು ಸಣ್ಣ ಪಾತ್ರೆಯಲ್ಲಿ ಹಾಲು, ಇನ್ನೊಂದರಲ್ಲಿ ನೀರು ಮತ್ತು ಮೂರು ದಳಗಳ ಬಿಲ್ವಪತ್ರೆ ಹೂಗಳನ್ನಿಟ್ಟುಕೊಂಡು ಸರಿಯಾಗಿ 12 ಗಂಟೆಗೆ ಪೂಜೆ ಶುರು ಮಾಡಿ ಮೂರು ದಳಗಳಲ್ಲಿ ಬಿಲ್ವಪತ್ರೆಯಿಂದ ಲಿಂಗಕ್ಕೆ ಕ್ಷೀರಾಭಿಷೇಕ ಮಾಡಿ ಆಮೇಲೆ ಗಂಗಾಭಿಷೇಕ ಮಾಡಿ ಮಂಗಳಾರತಿ ಮಾಡಿ ಧ್ಯಾನದಲ್ಲಿ ಕುಳಿತು ಶಿವನಾಮ ಸ್ಮರಣೆ ಮನನ, ಪಠಣ, ಶ್ರವಣ, ಕೀರ್ತನಾದಿಗಳಿಂದ ಶಿವನ ಗುಣಗಾನ ಮಾಡುತ್ತಾ ಭಜಿಸುವವರು ಮೂರು ಜನ್ಮದ ಪಾಪಗಳಿಂದಲೂ ಮುಕ್ತಿ ಪಡೆಯುತ್ತಾರೆ. ಹೀಗೆ 12,2,4,6 ಗಂಟೆಗಳಿಗೊಮ್ಮೆ ಎಂಬಂತೆ ನಾಲ್ಕು ಬಾರಿ ಪೂಜಿಸಿ ಬೆಳಿಗ್ಗೆ 6.00 ಗಂಟೆಗೆ ಸ್ನಾನ ಮಾಡಿ ಹತ್ತಿರವಿರುವ ಶಿವಾಲಯಕ್ಕೆ ಹೋಗಿ ಅಲ್ಲಿ ತೀರ್ಥ ಪ್ರಸಾದ ಸ್ವೀಕರಿಸಿ ಮನೆಗೆ ಬಂದು ಬೇಕಾದ್ದೆಲ್ಲವನ್ನು ತಿಂದು ಮಲಗಬಹುದು. ನಮ್ಮ ಹಿಂದೂ ಸಂಸ್ಕೃತಿಯ ಕರಾವಳಿ ಜನರಿಗೆ ದೈವ ದೇವರುಗಳ ಹಬ್ಬ ಹರಿದಿನಗಳ ಆಚರಣೆ ಜನರಿಗೆ ಜ್ಞಾನ ದೇಗುಲವಿದ್ದಂತೆ. ಧಾರ್ಮಿಕಾಚರಣೆ ನಮ್ಮ ಸಂಸ್ಕೃತಿಯ ಪ್ರತೀಕ. ಜನರಿಗೆ ಧರ್ಮಾಭಿಮಾನ ಮೂಡಿ ಕತ್ತಲಿನಿಂದ ಬೆಳಕಿನೆಡೆಗೆ ಸಾಗಲು ಇದು ಪೂರಕ. ಈ ಸಂಪ್ರದಾಯ ಪರಂಪರೆ ನಮ್ಮ ಮುಂದಿನ ಪೀಳಿಗೆಗೆ ತಲುಪಿಸುವ ಕೆಲಸವಾಗಬೇಕು.


# ಆರ್ಥಿಕವಾಗಿ ಸಂಕಷ್ಟದಲ್ಲಿರುವವರಿಗೆ ಜಾಗತಿಕ ಬಂಟರ ಸಂಘಗಳ ಒಕ್ಕೂಟದಿಂದ ನೆರವು

ಅಧ್ಯಕ್ಷ ಶ್ರೀ ಐಕಳ ಹರೀಶ್ ಶೆಟ್ಟಿ, ಗೌರವ ಕಾರ್ಯದರ್ಶಿ ಶ್ರೀ ಜಯಕರ ಶೆಟ್ಟಿ ಇಂದ್ರಾಳಿಯವರು ಜಾಗತಿಕ ಬಂಟರ ಸಂಘಗಳ ಒಕ್ಕೂಟ(ರಿ)ದ ವತಿಯಿಂದ 31 ಮಂದಿ ಫಲಾನುಭವಿಗಳಿಗೆ (ಮದುವೆಗೆ–08, ವೈದ್ಯಕೀಯ ಚಿಕಿತ್ಸೆಗೆ– 10, ವಿದ್ಯಾಭ್ಯಾಸಕ್ಕೆ–11 ಮತ್ತು ಇತರೆ ಯೋಜನೆಗೆ– 02) ಸಹಾಯಧನ ಮಂಜೂರು ಮಾಡಿದ ಚೆಕ್‌ಗಳನ್ನು ದಿನಾಂಕ 25.02.2021 ರಂದು ಒಕ್ಕೂಟದ ಆಡಳಿತ ಕಛೇರಿ ಮಂಗಳೂರು ಇಲ್ಲಿ ಇವರು ವಿತರಿಸಿದರು.

ಒಕ್ಕೂಟದಿಂದ ಏಪ್ರಿಲ್ 2018 ರಿಂದ ಫೆಬ್ರವರಿಗೆ 2021 ರವರೆಗೆ ಸುಮಾರು 4 ಕೋಟಿ ರೂ.ಗಳಿಗೂ ಅಧಿಕ ಸಹಾಯಧನವನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಒಕ್ಕೂಟದ ಮಾಜಿ ಕೋಶಾಧಿಕಾರಿ ಶ್ರೀ ಬಾಲಕೃಷ್ಣ ರೈ ಕೊಲ್ಲಾಡಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಚಂದ್ರಶೇಖರ ಹೆಗ್ಡೆ ಶಾನಾಡಿ, ಶ್ರೀ ಸುದರ್ಶನ್ ಶೆಟ್ಟಿ ಪೆರ್ಮಂಕಿ, ಒಕ್ಕೂಟದ ಆಡಳಿತಾಧಿಕಾರಿ ಸಚ್ಚಿದಾನಂದ ಹೆಗ್ಡೆ ಕೊಳ್ಕೆಬೈಲ್, ಸಿಬ್ಬಂದಿಗಳು ಹಾಗೂ ಫಲಾನುಭವಿಗಳು ಉಪಸ್ಥಿತರಿದ್ದರು.

# AMRITAM JALAM, SAVE WATER FOR SECURE FUTURE



A.Girish Rai

**Water is the elixir of life to every living being in this planet. Fresh water is a life creating and life sustaining fluid. People in different periods have considered water as an integral part of civilized way of life and crucial for the progress of society. Water is critical to keep every cell and organ of our body hydrated and functional. Water wealth has major impact on settlement, agriculture, development and health of human beings. Recently, it has been found that water alkalinity can boost immunity in combating the novel Coronavirus or COVID 19. Water is a depleting resource and failure of monsoon has resulted in its acute shortage. The fragile connection between water, food, energy and land exacerbates the water scarcity issue, and it is further aggravated in the context of climate change. Effective and timely action has to be taken in this matter. Hon. Prime Minister Shri Narendra Modiji has stressed the need for saving every drop of water and "Jal Kranti" should be envisaged. Former US President John F. Kennedy has said that "One who solves the problem of water is worth two Nobel Prizes, one for Peace and another for Science."**

It is estimated that human beings started living in this Earth since about 10,000 years ago. Many civilizations throughout the world were developed in and around the places where water was available. People began to inhabit around the places with water bodies and rivers. These places were the actual cradles of civilization. Early men (nomads, hunters) gradually established permanent places to live in these areas. They depended on rudimentary type of agriculture for their livelihood. This system gradually led to the formation of localities and villages, towns and urbanization.

Adequate rainfall, rivers, streams, lakes and wetlands are the main sources of surface water. These ecosystems provide habitat to innumerable varieties of plants and animal species. Land used for agriculture, forestry, industry and urbanization impact water resources. Tilling of land and cutting forests affect infiltration and run off characteristics which reduce ground water yield. Letting off surface water and ground water for irrigation changes natural water distribution system. This is what is potentially causing streams and ground water to be reduced. During the last 2-3 decades, shortage of water has become a serious issue. Irregular monsoon, inadequate rainfall, indiscriminate use of water for domestic and urbanization are the causes of shortage. When we look around, we notice that the water tap is turned on, even when not needed. We choose a hose to clean our vehicles, when a bucket of water will do. We use showers and taps longer than necessary. Water leakages remain unattended on roads.

Karnataka contributes roughly about 6% water wealth to the country. Dams and reservoirs hold more than 5000 TMC of water for agriculture, industry and drinking purpose. There are some projects still under construction mainly due to resource constraints. The present government under the leadership Hon. CM Mr. B. S. Yediyurappa and ably assisted by Water Resources Minister, Sri. Ramesh Jarkiholi have decided to speed up the completion of all the ongoing projects in time. The government has set up "Irrigation Commission" to supervise and advise ways and means to speed up the work. The Navali Dam Project, Navali village, Koppal district is expected to be completed soon. This dam project maybe the biggest in the state, even bigger than the Tungabhadra Dam upon completion. Karnataka Government has submitted a detailed report to central water commission regarding the Mekedatu reservoir. This project costing 6000 Crores is expected to

improve drinking water situation in Bengaluru city. The state government has also given in principal administrative approval for Rs 1677 CR for the completion of Kalasa Banduri project. These projects are expected to ease the drinking water needs of Hubli, Dharwad, Belagavi and Gadag districts. The Government of Karnataka expects these projects besides solving drinking water issues will also bring about 12000 Hectares of land under irrigation.

**Global Water Scarcity**

The demand for water is increasing all over the world due to growth of population and rapid urbanization. Water is a dwindling resource which has economic and social impact. As such, all decisions on this issue needs a long-term vision, meticulous planning and implementation. The World Water Development Report 2003 prepared by the United Nations member countries pointed out that this crisis is mainly an issue of governance. South Asian countries like other countries are facing acute shortage of water. Nations in the Asian subcontinent share water from major river basins, the Indus, Ganges and Brahmaputra. These rivers are the largest single economic resource of this region. Many economists feel that the biggest constraint on the future growth of world economy is not related to shortage of oil but water. Sri Brahmachallani in his book, "Water Asia's New Battleground" writes, "While international attention on China's recidivist activities in the South China Sea's disputed waters, Beijing is also focusing quietly on other waters of rivers that originate in Chinese controlled territory of Tibet and flow to other countries. As part of China's broader strategy to corner natural resources, the new obsession is fresh water, the growing shortage of which is casting a cloud over economic future. By building cascades of large dams on international rivers just before they leave its territory, China is re-engineering cross border natural flow. Among the rivers it has targeted on the Mekong, the life line of South East Asia and the Brahmaputra. Brahmaputra river is very important for India as it counts for about 29% of the total run off, of India's rivers is key to river linking project and its basin possesses about 44% our total hydro power potential. China is still toying with the idea of re-routing the upper Brahmaputra river system. Recently, a Hong Kong newspaper reported that "China now plans to divert the Brahmaputra waters to Zinjiang by building the world's largest tunnel. It seeks to utilize hydropower potential of the Brahmaputra to China only" However, China has denied this.

**Disputes**

Besides China, India is entangled in water disputes with Nepal, Pakistan and Bangladesh. These countries are mainly agrarian and totally depend on river water. This single geo physical unit shares Indus, Ganges and Brahmaputra river waters. River Indus irrigates the territories of India and Pakistan while the River Ganges, River Brahmaputra and River Meghana drain water to Nepal, India and Bangladesh. Distribution of water has become a serious issue. Immediately after partition, the source of River Indus remained with India. Thus a strong hostility had risen over the sharing of the River Indus water. An ad hoc agreement was signed in 1948 between India and Pakistan. After detailed negotiations, Indus Water Treaty was signed on 19-Sep-1960 in the presence of the World Bank representatives. Then the government was generous enough to let more than 70% of water to Pakistan. The dispute between India and Nepal sharing the water of River Mahakali, a tributary of the River Ganga was settled and River Mahakali was official declared as a border river between India and Nepal.

**Fresh Water – Natural, Precious and Scarce**

There is a story in the Bible which tells that Moses who led the Israelites during the forty year long journey from Egypt back to Israel through the desert drew water from rock. Today, no one can recreate this technology. We need to find solutions to solve the ever growing demand for this precious liquid. Israel, over 60% desert, is

located in a semi-arid climatic zone. This country has been ravaged by scarcity of water. The government of this tiny nation with significant water shortage launched an initiative to close the gap between demand and available, renewable, fresh, natural water which comes from coastal aquifiers. The cutting edge innovations to tackle the water shortage helped to position Israel as a world leader in all aspects of water management.

United Arab Emirates (UAE) is a dry country surrounded by sea. There are no rivers and it rains only 8-10 days per year. They are hunting for freshwater in the ocean and the atmosphere and are turning the impossible into possible by converting sea water into fresh, drinking water. They have built thousands of factories where billions and billions of sea water is let into pipes where the salt is separated and filtered fresh water comes out in the other end of the pipe. They also get water by cloud seeding and the water requirements of over 10 million people of UAE are met with these means.

Denmark, Holland and some other European countries are experimenting to get fresh water through windmills. These windmills produce power and water by converting water vapor evaporating in the atmosphere in to fresh water. This innovation is also being experimented by the IIT team in Chennai. The idea of fresh water from atmosphere through windmills has caught the attention of Hon. Prime Minister Shri Narendra Modi.

**Initiatives by the Government of Karnataka**

Karnataka Government anticipating the impending water scarcity took up certain measures to solve this problem. The Watershed Development Scheme, conservation of water and enhancing the ground water level by harnessing rain water are some of them. Though rain water harvesting was introduced for houses about two decades ago, it has now become mandatory. The Karnataka Legislative Assembly based on a proposal by the BBMP making rain water harvesting mandatory for houses built in sites measuring 40x60 FT and above, by enactment. More than 100-200 water bodies were rejuvenated in Bengaluru city alone. Under the unique Million Wells Movement in 2018, Friends of Lakes and India Cares foundation enabled digging of 1.20 Lakh wells. The government is determined to retain tanks and water bodies wherever possible to clean and protect water sources. It is hoped that if all water sources are clean and refurbished, it will have a positive impact. The Government of Karnataka is embarking on water storage projects by building dams to hold overflowing water from rivers, deluging the rural areas. This would facilitate the rainwater to be used productively. Karnataka Irrigation Corporation has prepared a detailed project report and plans to build check dams.

**Save Water, Every Drop is Precious**

Water is humanity's most vital resource, yet its supply is taken for granted. Hon. Prime Minister Shri Narendra Modi plans to make water an every man's issue. The Ministry of Jala Shakti will supply tap water to every Indian house under ***Jal Jeevan Mission (JJM).*** This will help in faster socio economic development, improve quality of life and ease of living.

**In spite of the essentiality of water people all over the world have poorly managed the water issue. Now the magnitude of this problem is understood by the people all over the world. Many NGOs, water warriors, citizens have started a worldwide Andolan (movement) for popularizing the need to save every drop of water. The issue should be pursued with the zeal of Messiah mission and every one should be involved in this mission to save water. The future trajectory of our water policy should be clear and right.As per a McKinsey Report "By 2030 water demand in India will grow by almost 1.5 trillion m3. Against the demand, India's current water supply is approximately 740 billion m3. As a result, most of India's river basins could face severe deficit by 2030 unless corrective action is taken. This is how water risk will look like in the pessimistic pathway.**

# ಲೈನ್ ತಪ್ಪುತ್ತಿರುವ ಆನ್‌ಲೈನ್ ಶಿಕ್ಷಣ ಮಕ್ಕಳಿಗೆ ಶಿಕ್ಷೆಯಾಗದಿರಲಿ



**ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿ**

"ಶಿಕ್ಷಣದ ಮೌಲ್ಯ ಮತ್ತು ಪವಿತ್ರತೆ ಆದರ್ಶ ಜೀವನಕ್ಕೆ ನಾಂದಿಯಾಗಲಿ." "ಒಂದು ದೇಶದ ಪ್ರಗತಿ ವರ್ಗದ ಕೋಣೆಯಲ್ಲಿ ನಿರ್ಮಾಣವಾಗುತ್ತದೆ". "ನಮ್ಮ ದೇಶದಲ್ಲಿ ಕಲಿತು ವಿದೇಶಿಯರಿಗೆ ಕಲಿಸುವವರು ನಾವಾಗಬೇಕು". ಎಂದು ನುಡಿದವರು ಶ್ರೇಷ್ಠ ಶಿಕ್ಷಣ ತಜ್ಞ, ದಾರ್ಶನಿಕ, ತತ್ವಶಾಸ್ತ್ರದ ಗುರು ಡಾ। ರಾಧಾಕೃಷ್ಣನ್. 40 ವರ್ಷ ಶಿಕ್ಷಣ ಕ್ಷೇತ್ರದಲ್ಲಿ ದುಡಿದು ದೇಶದ ಮಹೋನ್ನತ ಹುದ್ದೆಗೇರಿದವರು.

ಭಾರತೀಯ ಶಿಕ್ಷಣ ಪದ್ಧತಿಯ ಪ್ರಕಾರ ಶಿಷ್ಯನಲ್ಲಿರುವ ಅಂತಃಶಕ್ತಿಯನ್ನು ಪ್ರದರ್ಶಿಸುವಂತೆ ಮಾಡುವುದು ಯಾವುದೇ ಗುರುವು ನೀಡುವ ಶಿಕ್ಷಣ. ಅಂಕಗಳಿಸಿರಿ ಆದರೆ ಜ್ಞಾನ ಸಂಪಾದನೆ ಗುರಿಯಾಗಿರಲಿ, ಪಠ್ಯಪುಸ್ತಕಗಳಿಗೆ ಪ್ರಾಮುಖ್ಯತೆ ಕೊಡಬೇಕು ಮತ್ತು ಪ್ರತಿ ಪಾಠದಲ್ಲಿರುವ ಮೌಲ್ಯಗಳನ್ನು ಅರಿತು ಜೀವನದಲ್ಲಿ ಪಾಲಿಸಬೇಕು. "ವಿದ್ಯೆ ಯಾರ ಸೊತ್ತೂ ಅಲ್ಲ" ಸಾಮಾಜಿಕ ಜಾಲತಾಣಗಳು ಮೊಬೈಲುಗಳು ನಿಮ್ಮ ಸೇವಕನಾಗಿರಬೇಕೇ ಹೊರತು ಮಾಲಕನಾಗಿರಬಾರದು ಎಂದು ಬೋಧಿಸುತ್ತಿರುವಾಗಲೇ ಬೆಂಬಿಡದ ಬೇತಾಳ ಕೊರೊನಾ. (ನೊವೆಲ್ ಕೊರೊನಾ ವೈರಸ್– ಕೋವಿಡ್ –19) ತನ್ನ ಆರ್ಭಟದಿಂದ ಜನಜೀವನದ ಪ್ರತಿಯೊಂದು ಕ್ಷೇತ್ರಗಳ ವ್ಯವಸ್ಥೆಯನ್ನು ತಲೆ ಕೆಳಗೆ ಮಾಡಿದೆ. ಈ ಕೊರೊನಾ ನಿರ್ದಿಷ್ಟ ಹಾದಿಯಲ್ಲಿ ಚಲಿಸುತ್ತಿಲ್ಲ.

ನಾಳಿನ ಭವ್ಯ ಭಾರತದ ದಿವ್ಯ ಪ್ರಜೆಗಳಾಗಬೇಕಾಗಿದ್ದ ಮಕ್ಕಳ ಮೇಲೆ ಕೊರೊನಾ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಗಾಢ ಪರಿಣಾಮ ಬೀರಿದೆ. ಮಕ್ಕಳಿಗೆ ಸರಿಯಾದ ಶಿಕ್ಷಣ ಸಿಗದಿದ್ದರೆ ಅವರ ಮುಂದಿನ ಭವಿಷ್ಯ ರೂಪುಗೊಳ್ಳುವುದಾದರೂ ಹೇಗೆ? ಈಗ ಸೂಚಿಸುತ್ತಿರುವ ಆನ್‌ಲೈನ್, ಮಕ್ಕಳಿಗೆ ವಿದ್ಯಾರ್ಥಿಗಳಿಗೆ ಪಾಠದ ಮೇಲಿರುವ ಗೊಂದಲವನ್ನು ಪರಿಹರಿಸಬಹುದೇ? ಗುರುಗಳು, ವಿದ್ಯಾರ್ಥಿಗಳಿಗೆ ಓದು ಜಾಸ್ತಿಗೊಳಿಸಲು, ಮೊಬೈಲ್ ಉಪಯೋಗ ಕಡಿಮೆಗೊಳಿಸಿ ಎಂದವರು ಈಗ ಮೊಬೈಲ್‌ಗೆ ಮೊರೆ ಹೋಗಿ ಎನ್ನುವಂತಾಗಿದೆ.

ಮನುಷ್ಯನ ಸಮಗ್ರ ಬೆಳವಣಿಗೆಗೆ ಪೂರಕವಾಗಬೇಕಾದ ಶಿಕ್ಷಣ ಮೊದಲೇ ಕೇವಲ ಪ್ರಶ್ನೆಗಳಿಗೆ ಉತ್ತರವನ್ನು ಬೋಧಿಸುವ ಶಿಕ್ಷಣವಾಗಿದೆ "ವಿದ್ಯೆ ವ್ಯಾಪಾರವಾಗಿದೆ" "ಹಕ್ಕಿಗಳಂತೆ ಹಾರಾಡಬೇಕಾದ ಮಕ್ಕಳು ಪಂಜರದ ಪಕ್ಷಿಗಳಾಗಿದ್ದಾರೆ."

ಪರಿವರ್ತನೆ ಜಗದ ನಿಯಮ, ಅನಿವಾರ್ಯ ಮತ್ತು ಅಭಿವೃದ್ಧಿಗೆ ಪೂರಕ ಆದರೆ ಪರಿವರ್ತನೆ ರಚನಾತ್ಮಕವಾಗಿರಬೇಕೇ ಹೊರತು ವಿನಾಶಕಾರಿಯಲ್ಲ. ಈಗ ಆನ್‌ಲೈನ್ ಶಿಕ್ಷಣದ ಬಗ್ಗೆ ಚಿಂತಿಸುವಾಗ ಭಾರತದಂತಹ 135 ಕೋಟಿ ಜನಸಂಖ್ಯೆಯ ಸರಿಸುಮಾರು ಮುಕ್ಕಾಲು ಭಾಗ ಜನರು ಹಳ್ಳಿಗಳಲ್ಲಿ ವಾಸಿಸುತ್ತಿರುವಾಗ, ಬಡತನ, ನಿರುದ್ಯೋಗ ತಾಂಡವವಾಡುತ್ತಿರುವಾಗ ಎಲ್ಲರಿಗೂ ಆನ್‌ಲೈನ್ ಶಿಕ್ಷಣ ಪಡೆಯುವುದು ಸಾಧ್ಯವೇ? ಪರಿಶೀಲಿಸಿ, ಸೌಲಭ್ಯಗಳೇನು? ಹಾಗೂ ಸಾಧಕ ಬಾಧಕಗಳನ್ನು ಯೋಚಿಸಬೇಡವೇ? ಇದಕ್ಕೆ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಸಿದ್ಧರಾಗಿದ್ದಾರೆಯೇ? ವಿದ್ಯಾರ್ಥಿಗಳಲ್ಲಿ ಆನ್‌ಲೈನ್‌ನಲ್ಲಿ ಕಲಿಯಬೇಕಾದ ಗ್ಯಾಜೆಟ್‌ಗಳು ಲಭ್ಯವಿದೆಯೇ? ಕೇವಲ ಮೊಬೈಲ್ ಲ್ಯಾಪ್‌ಟಾಪ್ ಸಾಕಾಗುವುದಿಲ್ಲ ಅದರೊಂದಿಗೆ ಅಂತರ್ಜಾಲ ಸೌಕರ್ಯವೂ ಬೇಕು. ಇದೀಗ ಎಲ್ಲಾ ಮೊಬೈಲ್ ಸಿಮ್ ಕಂಪೆನಿಗಳು ಅಂತರ್ಜಾಲ ಬೆಲೆಯನ್ನು ದಿನದಿಂದ ದಿನಕ್ಕೆ ಹೆಚ್ಚಿಸುತ್ತಲಿವೆ. ಆ ಬಗ್ಗೆ ಸಂಬಂಧಪಟ್ಟವರು ಕಾಳಜಿಯಿಂದ ಚಿಂತಿಸಿದ್ದಾರೆಯೇ? ಈ ಬಗ್ಗೆ

ಆಡಳಿತವರ್ಗ ಶಿಕ್ಷಣ ಇಲಾಖೆ, ಶಿಕ್ಷಕ ವರ್ಗ, ವಿದ್ಯಾರ್ಥಿಗಳು ಮತ್ತು ಹೆತ್ತವರು ಹಾಗೂ ರಕ್ಷಕರ ಅಭಿಪ್ರಾಯ ಕಲೆ ಹಾಕಿದೆಯೇ? ರಚನಾತ್ಮಕ ದಾರಿಯಲ್ಲಿ ಚಲಿಸಲು ಸಾಧ್ಯವಿದೆಯೇ?

ಒಬ್ಬ ವಿದ್ಯಾರ್ಥಿ ಪಾಠಪ್ರವಚನದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಭಾಗವಹಿಸುವ ಅವಕಾಶ ಸಿಗುವುದೇ? ವಿದ್ಯಾರ್ಥಿ ಶಾಲಾ ಕಾಲೇಜು ಪರಿಸರದಲ್ಲಿ, ಅಧ್ಯಾಪಕರು ಹಾಗೂ ಸ್ನೇಹಿತ ವಿದ್ಯಾರ್ಥಿಗಳೊಳಗಿನ ಒಡನಾಟ, ಮಾನವೀಯ ಸಂಬಂಧಗಳನ್ನು ಅಭಿವೃದ್ಧಿಗೊಳಿಸಲು ಸಾಧ್ಯವೇ?

ಡಾ। ಕಸ್ತೂರಿರಂಗನ್ ನೇತೃತ್ವದಲ್ಲಿ ಪ್ರೊ. ವಳಿಯತ್ತನ್ ಮತ್ತು ಇತರೇ ಎಂಟು ಉನ್ನತ ಶಿಕ್ಷಣ ತಜ್ಞರಿಂದ ಶಿಕ್ಷಣದ ಉದ್ದೇಶ, ಪರಿಣಾಮವನ್ನು ಸಾಧಿಸುವ ಹೊಸ ಶಿಕ್ಷಣ ನೀತಿ ಜಾರಿಯಾಗುವುದೆಂಬ ಆಕಾಂಕ್ಷೆಯಲ್ಲಿದ್ದ ಶಿಕ್ಷಣಾಭಿಮಾನಿಗಳ ಬಯಕೆಯೂ ತಳಮಳಗೊಂಡಿದೆ.

ಸಾಮಾಜಿಕ ಜಾಲತಾಣಗಳ ಅಪರಾಧಗಳ ಕಡಿವಾಣಕ್ಕೆ ಚಿಂತನೆ ನಡೆಸದೆ ಆನ್‌ಲೈನ್ ಬಗ್ಗೆ ಗುರುತರ ಜವಾಬ್ದಾರಿಯುತ ಆಡಳಿತದ ಚುಕ್ಕಾಣಿ ಹಿಡಿದವರು ದಿನಕ್ಕೊಂದು ಮಾತನಾಡಿ ಗಲಿಬಿಲಿಗೊಳಿಸುತ್ತಿರುವುದು ವಿಪರ್ಯಾಸ. ಈ ಆನ್‌ಲೈನ್ ಬಗ್ಗೆ ಗುರುಗಳಷ್ಟೇ ಜವಾಬ್ದಾರಿ ಹೆತ್ತವರು ಮತ್ತು ರಕ್ಷಕರಿಗೂ ಇದೆ.

ಶಿಕ್ಷಣವೆನ್ನುವುದು ಮೊದಲೇ ಗೊಂದಲದ ಗೂಡಾಗಿದೆ. ಈ ಕೊರೊನಾವೆಂಬ ಮಹಾಮಾರಿಯ ದುರಂತಗಳು ಸತ್ಯನಾಶವಾಗುವಂತೆ ಮಾಡಿದುದು ಇಡೀ ಮನುಕುಲಕ್ಕೆ ಎರಗಿದ ದುರದೃಷ್ಟ ಮತ್ತು ಶಾಪ.

"ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ ಅತ್ಯಂತ ಮಹತ್ತರವಾದುದು. ಆದರೆ ಇಂದು ಶಿಕ್ಷಣವೆಂಬುದು ಪಠ್ಯಪುಸ್ತಕದ ಬದನೆಕಾಯಿಯನ್ನು ಶಿಕ್ಷಕರು ಬೇಯಿಸಿ ವಿದ್ಯಾರ್ಥಿಗಳಿಗೆ ಬಡಿಸುತ್ತಿದ್ದಾರೆ. ಸಮಾಜದ ಬಹುಪಾಲು ಶಿಕ್ಷಣವನ್ನು ಪಠ್ಯಪುಸ್ತಕದ ಪ್ರಶ್ನೆಗಳಿಗೆ ಉತ್ತರವನ್ನು ನೀಡಿ ಪದವಿ ಪ್ರಧಾನ ಮಾಡುವಂತಾಗಿದೆ."

ದೇಶೀಯ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಶಿಕ್ಷಣವು ಮಹತ್ತರವಾದ ಪಾತ್ರವನ್ನು ವಹಿಸುತ್ತದೆ. ಶಿಕ್ಷಣವು ಮನುಷ್ಯನಲ್ಲಿರುವ ಎಲ್ಲಾ ರೀತಿಯ ಪ್ರತಿಭೆಗಳನ್ನು ಪ್ರದರ್ಶಿಸುತ್ತದೆ. ಶಿಕ್ಷಣದಿಂದ ಮಾನವ ಸಂಪನ್ಮೂಲ ಸಂಪೂರ್ಣವಾಗಿ ಬಳಸಿಕೊಂಡಾಗ ರಾಷ್ಟ್ರ ನಿರ್ಮಾಣದಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಸಾಮಾಜಿಕ ಮತ್ತು ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡುತ್ತದೆ. ದೇಶದ ಆರ್ಥಿಕತೆ, ಆರೋಗ್ಯ, ಆಡಳಿತ ಎಲ್ಲವನ್ನು ಸರಿದಾರಿಯಲ್ಲಿ ಕೊಂಡೊಯ್ಯುವುದು ಶಿಕ್ಷಣ. ಹಲವಾರು ಖಾಸಗಿ ಕ್ಷೇತ್ರಗಳಲ್ಲಿ ಶಿಕ್ಷಣವನ್ನು ಉದ್ಯಮವಾಗಿಸಿ ಹೈಟೆಕ್ ಎಂಬ ಬಣ್ಣ ಹಚ್ಚಿ ಅಧಃಪತನಕ್ಕೆ ಕಾರಣವಾಗಿದ್ದಾರೆ. ಶ್ರೀಮಂತರು ಮಾರು ಹೋಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕೊರೊನಾವೆಂಬ ಪಿಡುಗು ಅಂತರ್ಜಾಲದ ದಾರಿಯನ್ನು ವಿಸ್ತಾರಗೊಳಿಸಿ ಸುಗಮವಾಗಿಸಿದೆ ಮತ್ತು ಅನಿವಾರ್ಯತೆಯನ್ನು ಸೃಷ್ಟಿಸಿದೆ ಆದರೆ ರಚನಾತ್ಮಕವಾಗಬೇಕು.

ಮೊದಲೇ "ಮಕ್ಕಳಿಗೆ ಶಿಕ್ಷಣ ಶಿಕ್ಷೆಯಾಗಿದೆ." ಸಾಮಾಜಿಕ ಜಾಲತಾಣಗಳು ಸರ್ವೇ ಸಾಮಾನ್ಯ ಸಮಾಜದ ಎಲ್ಲಾ ವರ್ಗದ ಜನರನ್ನು ಜೇಡರ ಬಲೆಯಂತೆ ಆವರಿಸಿಕೊಂಡಿದೆ. ಇದು ಅಪಾಯಕಾರಿ ಎಂದು ಹೇಳುತ್ತಲೇ ಬಂದಿದ್ದೇವೆ. ಆದರೆ ಪಾಲಿಸುತ್ತಲೇ ಇರುವುದು ವಿಪರ್ಯಾಸ. "ಭಾಷೆ ಬತ್ತಿಹೋಗಿದೆ." "ನಗು ಸಹಜತೆಯನ್ನು ಕಳೆದುಕೊಂಡಿದೆ" ಎಲ್ಲರೂ ತಲೆ ತಗ್ಗಿಸಿದ್ದಾರೆ. ಮಾನವೀಯತೆಯ ಅವಿನಾಭಾವ ಸಂಬಂಧಗಳು ನಶಿಸಿವೆ. ಯಾವ ಸೃಜನಶೀಲತೆಯೂ ಇಲ್ಲದೆ ಸಾಮಾಜಿಕ ಜಾಲತಾಣಗಳ ಆ್ಯಪ್‌ಗಳನ್ನು ಫಾರ್ವರ್ಡ್ ಮಾಡುತ್ತಲೇ ತೃಪ್ತರಾಗಿದ್ದೇವೆ. ಇದೇ ಸಮಯದಲ್ಲಿ ಮಕ್ಕಳನ್ನು ಆನ್‌ಲೈನ್ ಶಿಕ್ಷಣ, ಮೊಬೈಲ್, ಲ್ಯಾಪ್‌ಟಾಪ್ ಕಂಪ್ಯೂಟರ್‌ಗಳ ದಾಸರನ್ನಾಗಿ

ಮಾಡಿಸುವ ಮತ್ತೊಂದು ಮಜಲಾಗಬಾರದು. ಇದರಿಂದ ಮಕ್ಕಳಿಗೆ ಓದುವ ಬರೆಯುವ ಆನಂದದ ಸ್ಪರ್ಷವೇ ಮಾಯವಾಗುವ ಅಪಾಯವಿದೆ. ಈ ಡಿಜಿಟಲ್ ಯುಗದಲ್ಲಿ ಎಲ್ಲವೂ ಆನ್‌ಲೈನ್. ಮಿತಿಮೀರಿ ಗಡಿರೇಖೆಯನ್ನು ದಾಟಿ ಅಯೋಮಯವಾಗಿದೆ. ಅಧ್ಯಾಪಕರು ಪವರ್‌ಪಾಯಿಂಟ್ ಪ್ರದರ್ಶನದಿಂದ ಪಾಠಹೇಳಿಕೊಡುತ್ತಿದ್ದಾರೆ. ಶಿಸ್ತು, ಸಂಸ್ಕಾರ ಶಿಕ್ಷಣ ಕಲಿಕೆ ನಶಿಸುತ್ತಿರುವ ಸಮಯದಲ್ಲಿ ಸಂಪೂರ್ಣ ನಶಿಸಬಹುದು.

ಅನಿವಾರ್ಯವಾಗಿ ಈ ಕೊರೊನಾ ಸಂದಿಗ್ಧ ಪರಿಸ್ಥಿತಿಯಲ್ಲಿ ತಾತ್ಕಾಲಿಕವಾಗಿ ಆನ್‌ಲೈನ್ ಶಿಕ್ಷಣ ಆಯ್ಕೆ ಮಾಡಿಕೊಂಡಿರುವುದು ವರ್ಗದ ಕೋಣೆಯ ಪಾಠಕ್ಕೆ ಪರ್ಯಾಯವಿರಬಹುದು ಆದರೆ ಇದಕ್ಕೆ ಇಂಬುಕೊಟ್ಟು ಕಲಿಕಾ ಪ್ರಕ್ರಿಯೆಯನ್ನು ವ್ಯವಹಾರವಾಗಿ ರೂಪಾಂತರಿಸಿ ಶಿಕ್ಷಣ ವ್ಯವಸ್ಥೆಯ ಮೂಲಭೂತ ನಿಯಮಗಳಿಗೆ ಧಕ್ಕೆ ಮಾಡಬಾರದು. ಇದನ್ನು ಉತ್ತಮ ಶಿಕ್ಷಣವೆನ್ನಲಾಗದು. ಇಲ್ಲಿ ಗಮನಾರ್ಹವಾದ ಇನ್ನೊಂದು ವಿಷಯ ಪವರ್‌ಪಾಯಿಂಟ್ ಪ್ರದರ್ಶನ ಮಾಡುತ್ತಿರುವ ಅಧ್ಯಾಪಕರು ವಿವರಣೆಗಿಂತ ಪವರ್‌ಪಾಯಿಂಟ್ ಓದುದರಲ್ಲೇ ನಿರತರಾಗಿರುತ್ತಾರೆ. ಅದಲ್ಲದೆ ಈ ಶೈಲಿ ಮಕ್ಕಳಿಗೆ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರದೇ ಇರಲಾರದು. ವಿಷಯ ಕೂಲಂಕುಶವಾಗಿ ಅರ್ಥವೂ ಆಗಲಾರದು.

"ಹುಟ್ಟುವ ಪ್ರತಿಯೊಂದು ಮಗುವೂ ಜಗತ್ತನ್ನಾಳುವ ಶಕ್ತಿಯನ್ನು ಹೊಂದಿರುತ್ತದೆ" ಎಂದು ಹೇಳುತ್ತಾರೆ. ಅದು ಹೌದು. ಅದೇನೇ ಇದ್ದರೂ ಒಬ್ಬ ಅಧ್ಯಾಪಕ ಒಬ್ಬ ವಿದ್ಯಾರ್ಥಿಯನ್ನು ಆದರ್ಶ ಜವಾಬ್ದಾರಿಯುತ ಪ್ರಜೆಯನ್ನಾಗಿ ಮಾಡಲು ಪ್ರೇರೇಪಿಸಿ ಮಾರ್ಗದರ್ಶನ ನೀಡಲು ಗುರುವಿರಲೇಬೇಕು. ಆನ್‌ಲೈನ್‌ನಲ್ಲಿ ಇದು ಅಸಾಧ್ಯ. ಶಿಕ್ಷಣದಲ್ಲಿ ಅಧ್ಯಾಪಕರು ವಿದ್ಯಾರ್ಥಿಗಳ ಬದುಕನ್ನು ಹಸನುಗೊಳಿಸಲು ತಮ್ಮನ್ನು ಸಂಪೂರ್ಣ ಅರ್ಪಿಸಿಕೊಳ್ಳುತ್ತಿದ್ದರು. ಶಿಕ್ಷಕರ ಬಗ್ಗೆ ತಜ್ಞರು ಹೇಳುವ ಮಾತೆಂದರೆ ಸಾಮಾನ್ಯ ಅಧ್ಯಾಪಕ ವಿವರಿಸುತ್ತಾನೆ. ಉತ್ತಮ ಅಧ್ಯಾಪಕ ಬೋಧಿಸುತ್ತಾನೆ. ಗುರು ಸ್ಫೂರ್ತಿಗೊಳಿಸುತ್ತಾನೆ. ಇದು ಸರ್ವಕಾಲಿಕ ಸತ್ಯ. ಅಜ್ಞಾನವೆಂಬ ಅಂಧಕಾರವನ್ನು ಹೊಡೆದೋಡಿಸುವವನೇ ಗುರು. ಈ ಆನ್‌ಲೈನ್ ಶಿಕ್ಷಣದಿಂದ ಇದು ಸಾಧ್ಯವೇ? ಆನ್‌ಲೈನ್ ಶಿಕ್ಷಣದಿಂದ ಮಕ್ಕಳು ಮಾನವನಂತೆ ಬಾಳುವುದನ್ನು ಕಲಿಸುವುದು ಕಷ್ಟ ಸಾಧ್ಯ. ಈಗ ಈ ಮಹಾಮಾರಿ ಕೊರೊನಾ ಮಾನವನ ಮತ್ತು ವಿದ್ಯಾರ್ಥಿ ಅಧ್ಯಾಪಕರ ನಡುವಿನ ಬಾಂಧವ್ಯದ ಕೊಂಡಿಯನ್ನು ಕಳಚುವಂತೆ ಮಾಡಿದೆ. ಮನುಷ್ಯ ವಿಜ್ಞಾನ, ತಂತ್ರಜ್ಞಾನ ಬೆಳೆಸಿದ ಆದರೆ ವಿವೇಕವನ್ನು ಬೆಳೆಸಲಿಲ್ಲ. ಈ ಆನ್‌ಲೈನ್ ಶಿಕ್ಷಣದ ಬಗ್ಗೆ ಅವಿವೇಕವನ್ನು ಯಾರೂ ವ್ಯಕ್ತಪಡಿಸಲಾರದು.

ಯಾವ ಕ್ಷೇತ್ರ ಇತರ ಎಲ್ಲಾ ಕ್ಷೇತ್ರಗಳಿಗೆ ಜ್ಞಾನ ಹಾಗೂ ಕೌಶಲ್ಯವನ್ನು ಬೋಧಿಸಿ ಅಲ್ಲಿಯ ಜನರಿಗೆ ಕೂಳು ಸಿಗುವಂತೆ ಮಾಡಿದೆಯೋ ಆ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಶಿಕ್ಷಕರು ಈ ಆನ್‌ಲೈನ್ ಶಿಕ್ಷಣಕ್ಕೆ ಇಂಬುಕೊಟ್ಟರೆ ತನ್ನ ಅನ್ನವನ್ನೇ ಕಳೆದುಕೊಳ್ಳ–ಬೇಕಾದೀತು.

"ಶಿಕ್ಷಕನ ಮನೆಯ ಒಲೆಯಲ್ಲಿ ಬೆಂಕಿ ಉರಿದರೆ ಮಾತ್ರ ಆತ ಇನ್ನೊಬ್ಬರ ಮನೆಯ ಬೆಳಕನ್ನು ಬೆಳಗಿಸಲು ಸಾಧ್ಯ."

ಒಬ್ಬ ಒಳ್ಳೆಯ ಗುರು ವಿದ್ಯಾರ್ಥಿಗೆ ಕಲಿಸಬೇಕಾಗಿರುವುದು "ವಿದ್ಯೆ ಯಾರ ಸೊತ್ತೂ ಅಲ್ಲ" "ಯಾವ ಒತ್ತಡಕ್ಕೂ ಮಣಿಯಬಾರದು" – There is no shortcut for success." "There is no substitute for hard work". Manage to overcome the difficult times thereby, you land up with good time." "Make problems as your opportunities".

ಈ ಕೊರೊನಾ ಸಂಕಷ್ಟದಲ್ಲಿಯೂ ಎಲ್ಲರೂ ಯೋಚಿಸಿ ಕಲಿಯಬೇಕಾದುದು ಇದನ್ನೇ.

# "ಕನಸೆಂಬ ಹಣತೆಯೋ ಅಥವಾ ಹೊರೆಯೋ ..!!!"



ಸಂದೀಪ್ ಶೆಟ್ಟಿ

ಕನಸು ಕಾಣುವುದು ಮನುಜ ನಿಯಮ, ತನ್ನ ಕನಸನ್ನು ನನಸು ಮಾಡುವ ಸಂಘರ್ಷವೇ ಬದುಕು. ಕೆಲವೊಮ್ಮೆ ಕನಸುಗಾರನೆ ತನ್ನ ಕನಸಿನ ಗುರಿಮುಟ್ಟುವ ದಾರಿಯ ಸೃಷ್ಟಿಕರ್ತನಾಗುವ ಸಂಭವವೂ ಒದಗಬಹುದು. ಇರುವ ದಾರಿಯಲ್ಲಿ ಪಯಣಿಸುವುದು ಸರಳ ಮತ್ತು ಸುಖಕರವಾದದ್ದು ಆದರೆ ದಾರಿ ಸೃಷ್ಟಿಸಿ ಪಯಣಿಸುವವನ ಎದೆಗಾರಿಕೆ ದುಪ್ಪಟ್ಟಿರಬೇಕು. ಈಜುಗಾರನಿಗೆ ಹರಿಯುವ ನೀರಿನ ಜೊತೆಗೆ ಸಾಗುವುದು ಸುಲಭದಾಯಕವಾದದ್ದು. ಆದರೆ ಹರಿಯುವ ನೀರಿಗೆ ಮೈಒಡ್ಡಿ ಅದರ ವಿರುದ್ದ ದಿಕ್ಕಿನಲ್ಲಿ ಸಾಗಲು ಅಧಿಕ ಶ್ರಮದ ಅಗತ್ಯವಿರುವಂತೆ, ನಿನ್ನ ಕನಸಿನ ಪಯಣವು ಕೂಡ ಅಷ್ಟೆ ಶ್ರಮ ಮತ್ತು ಛಲದಿಂದ ಕೂಡಿರುತ್ತದೆ. ಕನಸು ನನಸಾದಂತೆ ನೀನು ಯಶಸ್ಸಿನ ಮೆಟ್ಟಿಲು ಏರುವೆ. ಯಶಸ್ಸು ದೊರೆತಾಗ ಸಂಭ್ರಮಿಸುವುದು ಸಹಜ, ಜೊತೆಗೆ ನಿನ್ನ ಬೆಂಬಲಿಸಿದವರನ್ನು ನೆನೆಯುವುದು ಕೂಡ ಅವಶ್ಯಕ.

ಯಶಸ್ಸು ಪಡೆದಂತೆ ಅಧಿಕ ಜವಾಬ್ದಾರಿಯು ನಿನ್ನ ಮೇಲಿರುತ್ತದೆ, ಹಾಗು ಅದನ್ನು ಸರಿ ದಾರಿಯಲ್ಲಿ ಮುನ್ನೆಡಸಿಕೊಂಡು ಹೋಗುವ ಕಲೆಯನ್ನು ಅರಿಯುವುದು ಅಗತ್ಯವಿದೆ. ಕನಸು ನನಸಾಗದಿದ್ದಾಗ ತನ್ನ ಪ್ರಶ್ನಿಸಿ ಮರಳಿ ಪ್ರಯತ್ನವ ಪಡುವೆ. ನೀ ಕಂಡ ಕನಸಿಗೆ ನೀನೇ ಅಖಾಡಕ್ಕೆ ಇಳಿಯಬೇಕು, ಹಾಗೂ ಅಖಾಡದಲ್ಲಿ ನಿನ್ನ ಸಂಘರ್ಷವು ಪೂರ್ವ ನಿಯೋಜಿತ.


ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಗಾದೆಯಂತೆ, ತನ್ನ ಕನಸಿನ ಬಗ್ಗೆ ತನ್ನವರಲ್ಲಿ ಹಂಚಿಕೊಳ್ಳುವುದು ಸಹಜ, ನಿನ್ನವರು ನಿನ್ನ ಕನಸಿಗೆ ಸಹಕರಿಸಬಹುದು ಅಥವಾ ಪ್ರೋತ್ಸಾಹಿಸಬಹುದು. ಆದರೆ ನೀನೇನು ಮಾಡುತ್ತಿರುವೆ ಮನುಜ..!! ನಿನ್ನ ಭಗ್ನವಾದ ಕನಸಿನ ಹಣೆಪಟ್ಟಿಯನ್ನು ನಿನ್ನವರ ಹಣೆಗೆ ಹಚ್ಚಿ ಅಖಾಡಕ್ಕೆ ದೂಡುತ್ತಿರುವೆಯಲ್ಲ... ಹಾಗಾದರೆ ನಿನ್ನವರು ಕಟ್ಟಿದ ಕನಸನ್ನು ನನಸು ಮಾಡುವ ಜವಾಬ್ದಾರಿ ಯಾರದ್ದು..? ನಿನಗೆ ಆದೀತೇ..!!!!

ಎಲ್ಲೋ ಓದಿದ ನೆನಪು..!

ಒಂದು ಕೋತಿ ತಾನು ಕುಳಿತ ಮರದ ಬುಡದಲ್ಲಿ ಗಾಜಿನ ಬಾಟಲಿಯನ್ನು ನೋಡಿ ಅದರತ್ತ ದಾವಿಸಿದಾಗ, ಅದಕ್ಕೆ ಆಶ್ಚರ್ಯ ಕಾದಿತ್ತು. ಭಾರವಾದ ಬಾಟಲಿಯ ತಳದಲ್ಲಿ ಕಡಲೆ ಬೀಜವನ್ನು ನೋಡಿ ಆಸೆಯಿಂದ ತನ್ನ ಕೈಯನ್ನು ಹಾಕಿ, ತನಗಾದಷ್ಟು ಕಡಲೆಗಳನ್ನು ಬಾಚಿ, ಬಲವಾದ ಮುಷ್ಟಿಯನ್ನು ಕಟ್ಟಿ ಬಾಟಲಿಯಿಂದ ಹೊರತೆಗೆಯುವ ಪ್ರಯತ್ನದಲ್ಲಿರುವಾಗ ಅತ್ತಕಡೆಯಿಂದ ಬಾಟಲಿಯ ಮಾಲಿಕ ಬರುವುದನ್ನು ನೋಡಿತಾದರೂ, ತನ್ನ ಮುಷ್ಟಿಯನ್ನು ಸಡಿಲಗೊಳಿಸದೆ ಅವನ ಕೈಗೊಂಬೆ ಆಯಿತು. ಮಂಗನಿಂದ ಮಾನವನಾದರೂ ನಿನ್ನ ಮುಷ್ಟಿಯಲ್ಲಿರುವ ಪ್ರತಿಷ್ಠೆ, ಆಡಂಬರ, ಅಸೂಯೆ, ಪ್ರತೀಕಾರ, ಸೇಡು ಎಂಬ ಕಡಲೆಯನ್ನು ಹಿಡಿದು ಯಾರಿಗಾಗಿ ಕಾಯುತ್ತಿರುವೆ...!!?

ಗೊಳಿಸು ನಿನ್ನ ಮುಷ್ಟಿಯನ್ನು ಸಡಿಲ...
ಬಿಡು ಒಂದೊಂದಾಗಿ ನೀ ಹಿಡಿದ ಕಡಲೆ0ಯನ್ನು...
ಹೊರಿಸಬೇಡ ನಿನ್ನವರಿಗೆ ನೀ ಕಂಡ ಕನಸಿನ ಹೊರೆಯನ್ನು...
ಸುರಿ ನಿನ್ನವರು ಕಂಡ ಕನಸೆಂಬ ಹಣತೆಗೆ...
ಅನುಭವವೆಂಬ ಎಣ್ಣೆಯನ್ನು...

# ಭಾರತ ಸರ್ಕಾರದ ಪ್ರತಿಷ್ಠಿತ ಪದ್ಮಭೂಷಣ ಪ್ರಶಸ್ತಿಗೆ ಭಾಜನರಾದ ಡಾ। ಬಿ.ಎಂ ಹೆಗ್ಡೆಯವರಿಗೆ ಅಭಿನಂದನೆಗಳು



**ಡಾ। ಬಿ.ಎಂ ಹೆಗ್ಡೆ**

ಮದ್ರಾಸು ವಿಶ್ವವಿದ್ಯಾನಿಲಯದಿಂದ ಎಂ.ಬಿ.ಬಿ.ಎಸ್, ಲಕ್ನೋ ವಿಶ್ವವಿದ್ಯಾಲಯದಿಂದ ಎಂ.ಡಿ. ಪದವಿ, ಇಂಗ್ಲೆಂಡ್‌ನ ರಾಯಲ್ ಕಾಲೇಜ್‌ನ ಫೆಲೋ ಆದ ಪ್ರಥಮ ಹಾಗೂ ಏಕೈಕ ಕನ್ನಡಿಗ ಹಾಗೂ ಭಾರತೀಯ ಎನಿಸಿಕೊಂಡ ಇವರು ಮಣಿಪಾಲ ಕಸ್ತೂರ್ಬಾ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಪ್ರಾಚಾರ್ಯರಾಗಿ, ಡೀನ್ ಆಗಿ, ಮಾಹೆ ಉಪಕುಲಪತಿಯಾಗಿ ಸೇವೆ ಸಲ್ಲಿಸಿದರು. ದೇಶದ ಅನೇಕ ರಾಜ್ಯಗಳು ಆರೋಗ್ಯ ಸೇವೆ ವಿಸ್ತರಣೆ ಬಗ್ಗೆ ಇವರ ಸಲಹೆಗಳನ್ನು ಪಡೆದಿವೆ. 2010ರಲ್ಲಿ ಇವರಿಗೆ ಭಾರತ ಸರ್ಕಾರದ ಪ್ರತಿಷ್ಠಿತ ಪದ್ಮಭೂಷಣ ಪ್ರಶಸ್ತಿಯೂ ಲಭಿಸಿತ್ತು.

ಈ ವರ್ಷ ದೇಶದ ಎರಡನೇ ಅತ್ಯುನ್ನತ ಪ್ರಶಸ್ತಿ ಪದ್ಮಭೂಷಣ ಇವರಿಗೆ ಲಭಿಸಿರುವುದು ಬಂಟ ಸಮುದಾಯದ ನಮ್ಮೆಲರಿಗೂ ಹೆಮ್ಮೆಯ ವಿಷಯ.

**ಅಭಿನಂದನೆಗಳೊಂದಿಗೆ,**

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸರ್ವ ಸದಸ್ಯರು, ಬಂಟರ ಸಂಘ ಬೆಂಗಳೂರು**

# *Congratulations*



**Adwaiy Kishora Shetty**



**Ainesh Kishora Shetty**

Master Adwaiy Kishora Shetty (8th Std.) and Master Ainesh Kishora Shetty (5th Std.), son of Dr. Kishora Shetty, have participated in the National Level Competitions on "Information Cyber safety and Security Awareness" organized by Information Security Education and Awareness, Ministry of Electronics and Information Technology (MeitY), Govt. of India. Ainesh has won Second place in the state level results. Bunts Sangha Bangalore congratulates them and wishes all the best



# *Congratulations*

CA. B T Shetty has been elected as the Chairman of the Bangalore Branch of The Institute of Chartered Accountants of India, New Delhi (ICAI). Bunts Sangha Bangalore congratulates him and wishes him all the best.

**ದೀಪಜ್ಯೋತಿ ನಮೋಸ್ತುತೇ:**

ದೀಪ ಬೆಳಗಿದೆವಂದು ಶುಭ ರಾತ್ರಿಗಳಿಗೆಯಲಿ
ಮನೆ ಮನೆಯ ಹೊಸ್ತಿಲಲಿ । ದೇಶದುದ್ದಗಲದಲಿ
ಏಕತೆಯ ಭಾವದಲಿ । ಹೊಸತನದ ಸ್ಫೂರ್ತಿಯಲಿ
ನವನವೋನ್ಮೇಷದಲಿ । ಬೆರೆತು ಒಂದಾಗುತಲಿ ।

ಯಾಕೆ?
ಮನೆ ಮನೆಯ ಬೆಳಗಲಿಕೆ । ಮನದ ಕೊಳೆ ತೊಳೆಯಲಿಕೆ
ಭಿನ್ನತೆಯ ಮರೆಯಲಿಕೆ । ಒಮ್ಮತದ ತೋರಲಿಕೆ
ಹಗೆಹತಿಯ ತೊರೆಯಲಿಕೆ । ಬಗೆಯ ಕಳೆ ಕಳೆಯಲಿಕೆ
ಮತಭೇದವಳಿಸಲಿಕೆ । ಹಿತವಾಗಿ ಬಾಳಲಿಕೆ
ಬಡತನವ ನೀಗಲಿಕೆ । ಸಮೃದ್ಧಿಗಳಿಸಲಿಕೆ
ದುಶ್ಯಕ್ತಿ ನಿಗ್ರಹಕೆ । ಚಿಚ್ಛಕ್ತಿಯುದ್ಭವಕೆ
ಪರಿಸರದ ಸ್ವಚ್ಛತೆಗೆ । ಕಟಿಬದ್ಧರಾಗಲಿಕೆ
ಮಹಮಾರಿಯಾರ್ಭಟಕೆ । ಕೊನೆಯ ಮೊಳೆ ಹೊಡೆಯಲಿಕೆ
ಮನುಕುಲದ ರಕ್ಷಣೆಗೆ । ಸ್ವಾಸ್ಥ್ಯ ಸಂರಕ್ಷಣೆಗೆ
ಕಂಟಕನಿವಾರಣೆಗೆ । ಕಟು ನಿಯಮ ಪಾಲನೆಗೆ
ಕತ್ತಲೆಯ ಪೊರೆಹರಿದು । ಬೆಳಕಿನೆಡೆ ಸಾಗಲಿಕೆ
ಮತ್ತೆ ಭಾರತದಾತ್ಮಶಕ್ತಿಯನು ಸಾರಲಿಕೆ ।
...ದೀಪ ಬೆಳಗಿದೆವಂದು... ಮನೆ ಮನೆಯ ಹೊಸ್ತಿಲಲಿ
...ಮನುಕುಲದ ರಕ್ಷಣೆಗೆ... ವಿಶ್ವಕಲ್ಯಾಣಕ್ಕೆ.

**– ಜಯರಾಮ ರೈ ಕುಂಜಾಡಿ**

# "IGNITE A BRIGHTER FUTURE" BIKE RALLY





If you have a dream, don't just sit there. Gather courage to believe that you can succeed and leave no stone unturned to make it a reality.

Spreading awareness about the importance of Education to all has been a constant drive of the Bunts' Sangha RNS Vidyaniketan & Composite PU College, Bengaluru since time immemorial. In this regard it has pursued it to the optimum..

The pandemic of COVID 19 has posed greater challenges for all, in particular to the entire Education system of our Nation. The entire structure of Education came to a shattering halt with no time bound. But, Bunts' Sangha RNS Vidyaniketan & Composite PU College, continued with its humongous stride of spreading education, in different to the obstacles in its path, thereby keeping its commitment to Dr. R.N. Shetty, the late of Chairman of Bunts' Sangha RNS Vidyaniketan and a philanthropist's dreams of 'Education for all', thus taking a unique measure in this regard.

The Management and Staff of Bunts' Sangha RNS Vidyaniketan & Composite PU College, in association with the Demons on Throttle, The Riders of Tumakuru, The Santhosh Gym troupe and The Bunts' Sangha youth wing, Bengaluru organised a bike rally with a revolutionary slogan, **"IGNITING A BRIGHTER FUTURE",** creating an awareness on Education for all post COVID-19 on 28th February, Sunday, 2021

The mega bike rally incorporated more than 70 enthusiastic riders, that included the troupes of the Demons on Throttle, Riders of Tumakuru, Santhosh Gym troupe, the Bunts' Sangha youth wing and the teaching and non-teaching staff of Bunts' Sangha RNS Vidyaniketan & Composite PU College, all dedicated to the mission.

The rally was flagged off at Bunts' Sangha RNS Vidyaniketan & Composite PU College Vijayanagar Bangalore-40. The event was graced by Sri Baskar Rao, IPS, ADGP - Railways as the Chief Guest of the event, Smt. Malathi Krishna Murthy Holla, athlete,

Para Olympics and Manoj Kumar Chopra, Asia's Strongest Man and Sri.Ventakatesh, Traders Union Bengaluru as Guests of Honour.

Several engaging activities were organised for local people throughout the rally by the riders, teaching and non teaching staff of Bunts' Sangha RNS Vidyaniketan & Composite PU College at various pit stops contributing towards the Educational Awareness Campaign.

Covering a distance of more than 40 Kilometres, the rally culminated at the sprawling campus of Bunts' Sangha RNS Vidyaniketan & Composite PU College – II, Yalachaguppe, where all the enthusiastic bikers were graciously felicitated by the Management of Bunts' Sangha RNS Vidyaniketan & Composite PU College.

The Mega Bike rally was indeed a memorable event for all that has now niched its own place not just in the history of Bunts' Sangha RNS Vidyaniketan & Composite PU College, but also in the history of the education system of our country.

## *Congratulations*




Pavana Nagaraj, Class X student of Bunts' Sangha RNS Vidyaniketan, Bengaluru set a record at the 36th National Junior Athletics Championship held at Guwahati, India in 1st week of February 2021 by claiming the Gold Medal and by rewriting the Under – 16 National High Jump record of 1.73 Metres.

Pavana, daughter of Senior National record holder and a former Olympic participant, Smt.Sahana Kumari and B G Nagaraj, an acclaimed sprinter.

The Management, Principal, Staff and Students of Bunts' Sangha RNS Vidyaniketan congratulate and wish her all the best in her future career.

## ಅಭಿನಂದನೆಗಳು



ಕರ್ನಾಟಕ ಸರಕಾರ, ಸಾರಿಗೆ ಇಲಾಖೆ ಹಾಗೂ ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘ ಬೆಂಗಳೂರು ಇವರ ಜಂಟಿ ಆಶ್ರಯಲ್ಲಿ ಫೆಬ್ರವರಿ 12ರಿಂದ 14ರವರೆಗೆ ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ "ವಾಹನಗಳಿಂದ ವಾಯುಮಾಲಿನ್ಯ" ಎಂಬ ವಿಷಯದ ಬಗ್ಗೆ ನಡೆದ ರಾಜ್ಯಮಟ್ಟದ ವ್ಯಂಗ್ಯಚಿತ್ರ ಸ್ಪರ್ಧೆಯಲ್ಲಿ ಖ್ಯಾತ ವ್ಯಂಗ್ಯಚಿತ್ರಕಾರ ಶ್ರೀ ಹರಿಶ್ಚಂದ್ರ ಶೆಟ್ಟಿ ಎಂ. (ಹರಿಣಿ) ಇವರಿಗೆ ಪ್ರಥಮ ಬಹುಮಾನ ಬಂದಿರುತ್ತದೆ. ಇವರಿಗೆ ಬಂಟರ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

# ಹಳ್ಳಿ ಬದುಕು ಅಂದು ಇಂದು



ಪ್ರದೀಪ ಶೆಟ್ಟಿ ಬೇಳೂರು

ಜಗತ್ತೇ ಹೀಗೆ! ಬದಲಾವಣೆ ಕಣ್ಣು ಮುಚ್ಚಿ ತೆಗೆಯುವುದರೊಳಗೆ ಸಂಭವಿಸುತ್ತಿದೆ. ಆದರೆ ಈ ಬದಲಾವಣೆಯಲ್ಲಿ ನಾವು ಪಡೆದ ಮತ್ತು ಕಳೆದುಕೊಂಡುದರ ಬಗೆಗೆ ವಿಮರ್ಶೆ ಅತ್ಯಗತ್ಯ. ಇಂದು ಅಡಿಗೆ ಮನೆಯಲ್ಲಿ ಉಪಯೋಗಿಸುವ ವಸ್ತುಗಳಿಂದ ಹಿಡಿದು ಕೆಲಸ ಸ್ಥಳದವರೆಗೂ ನಮ್ಮ ದೈನಂದಿನ ಬದುಕು ಕೃತಕ ಯಂತ್ರಗಳಿಂದ ನಡೆಯುತ್ತಿದೆ. ಸರಿ ಸುಮಾರು ತೊಂಬತ್ತರ ದಶಕದ ಅಸುಪಾಸಿನಲ್ಲಿ ಹುಟ್ಟಿದವರಿಗೆ ಈ ಶತಮಾನದ ಪ್ರಾರಂಭದಲ್ಲಿ ತೀವ್ರ ಗತಿಯಲ್ಲಿ ಆದ ಬದಲಾವಣೆ ಮತ್ತು ಅದರ ಕೆಲವು ವರುಷಗಳ ಹಿಂದೆ ಹಳ್ಳಿಗಳಲ್ಲಿ ಜನರು ಬದುಕುತ್ತಿದ್ದ ರೀತಿ ರೀವಾಜುಗಳ ಅನುಭವ ಮತ್ತು ಪರಿಚಯ ಹತ್ತಿರದಿಂದ ಇರುತ್ತದೆ. ಅಂದಿನ ದಿನಮಾನದಲ್ಲಿ ಮೋಟಾರು ವಾಹನಗಳು ಹಳ್ಳಿಗಳಲ್ಲಿ ವಿರಳವಾಗಿದ್ದರಿಂದ ಜನರು ಕಾಲ್ನಡಿಗೆಯಲ್ಲಿ ಪ್ರಯಾಣ ಬೆಳೆಸುತ್ತಿದ್ದರು. ಇಲ್ಲವಾದರೆ ಎತ್ತಿನಗಾಡಿಯು ಪ್ರಯಾಣ ಬೆಳೆಸುತ್ತಿದ್ದರು. ಎತ್ತಿನಗಾಡಿಯೇನು ನೂರಾರು ಮೈಲಿ ವೇಗದಲ್ಲಿ ಚಲಿಸುವುದೇ ಹೂ ಹೂ ಹತ್ತಿಪ್ಪತ್ತು ಮೈಲಿಗಳ ವೇಗವೆ ಹೆಚ್ಚು. ಶಾಲೆಗೆ ಹೋಗುವ ಮತ್ತು ಬರುವ ವೇಳೆಯಲ್ಲಿ ಮಕ್ಕಳ ಕಣ್ಣಿಗೆ ಎತ್ತಿನಗಾಡಿ ಕಂಡರೆ ಅಂದಿನ ಪ್ರಯಾಣ ಅದರಲ್ಲೇ ಮುಗಿಸಿ ಬಿಡುತ್ತಿದ್ದರು.

ಪ್ರತಿಯೊಂದು ಮನೆಯಲ್ಲೂ ಹತ್ತಾರು ಜನರ ವಾಸ ಕೃಷಿ ಕೆಲಸವೆ ಪ್ರಮುಖ ಉದ್ಯೋಗವಾಗಿರುತ್ತಿತ್ತು. ಗದ್ದೆ ತೋಟ ಹಸು ಕರು ಕೋಣ ಕೋಳಿ ಇವುಗಳೆಲ್ಲವು ಇದ್ದರೆ ಮನೆ ಪರಿಪೂರ್ಣ ಅನಿಸುವಂತಿತ್ತು. ಶಾಲೆಗೆ ಹೋಗಿ ಬಂದ ಮೇಲೆ ಮಕ್ಕಳಿಗೆ ದನ ಮೇಯಿಸುವುದು, ಸಗಣಿ ಹೆಕ್ಕುವುದು, ಸೌದಿ ಒಟ್ಟುಗೂಡಿಸುವುದು ದೈನಂದಿನ ಕೆಲಸಗಳಲ್ಲಿ ಒಂದಾಗುತ್ತಿದ್ದವು. ಮನೆಯಲ್ಲಿ ಗೋಧಿ ಹುಡಿ ಮಾಡುವಾಗ ಹೇಳುವ ಹಾಡು, ಭತ್ತ ಕುಟ್ಟುವ ಹಾಡಿನಿಂದ ಹಿಡಿದು ಶಿವರಾತ್ರಿ, ದೀಪಾವಳಿ ಹಬ್ಬದ ದಿನದಂದು ಹೇಳುವ ಜಾನಪದ ಸಾಹಿತ್ಯವು ಎಲ್ಲರ ಬಾಯಲ್ಲೂ ಕಂಠಪಾಠದಂತೆ ಬರುತ್ತಿದ್ದವು. ಅವುಗಳು ಕಾಲ ಕಳೆಯುವ ಪದಗಳಾಗದೆ ಬದುಕಿಗೆ ಬೇಕಾದ ಮೌಲ್ಯಗಳ ಪಾಠವನ್ನು ಮಾಡುತ್ತಿದ್ದವು. ವರ್ಷಕ್ಕೆ ಕಡಿಮೆಯೆಂದರೂ ಎರಡು ಬೆಳೆ ತೆಗೆಯುವ ವಾಡಿಕೆಯಲ್ಲಿರುತ್ತಿದ್ದವು. ಕ್ರಮೇಣ ಹಳ್ಳಿಗಳಲ್ಲಿನ ಜನರ ಬದುಕು ಬದಲಾವಣೆ ಪರ್ವಕ್ಕೆ ಒಗ್ಗಿಕೊಳ್ಳಲಾರಂಭಿಸಿದವು. ಮನೆ ಮನೆಗಳು ಒಡೆಯಲಾರಂಭಿಸಿದವು. ಕೋಣಗಳ ಬದಲು ಉಳುಮೆಗೆ ಯಂತ್ರಗಳು ಬಂದವು, ಯಾವ ಕೋಣದ ಜೊತೆ ಉಳುಮೆ, ನಂತರ ಹೊಳೆ, ಕೆರೆಯಲ್ಲಿ ಅವುಗಳ ಸ್ನಾನ ಮಾಡಿಸಿ, ನಾವು ಒಂದಿಷ್ಟು ಈಜು ಹೊಡೆದು ಆ ಪ್ರಾಣಿಗಳ ನಡುವೆ ಅನ್ಯೋನ್ಯವಾದ ಸಂಬಂಧವಿದ್ದವೋ ಅದಕ್ಕೆ ನಾಂದಿ ಹಾಡಿ ಆ ಸಂಬಂಧಕ್ಕೆ ಕೊನೆ ಮೊಳೆ ಹೊಡೆದವು. ಹಸು ಕರುಗಳು ವಿರಳವಾದವು. ಗೋಧಿ ಅರೆಯುವ, ಭತ್ತ ಕುಟ್ಟುವ, ಪದಾರ್ಥ ಅರೆಯುವ, ಮಜ್ಜಿಗೆ ಕಡೆಯುವ ಹೀಗೆ ಎಲ್ಲಾ ಸಾಧನಗಳನ್ನು ಒಂದೊಂದೆ ಮೂಲೆಯಲ್ಲಿ ಸೇರಿಸಿಬಿಟ್ಟೆವು. ಅವುಗಳ ಜೊತೆ ಜೊತೆಗೆ ಜಾನಪದ ಸಾಹಿತ್ಯವು ಬಾಯಿಯಿಂದ ಮರೆಯಾಗಲಾರಂಭಿಸಿದವು. ಕೃಷಿ ಕೆಲಸ ವರ್ಷಕ್ಕೆ ಒಂದು ಸಾರಿ ಮಾಡಿದರೆ ಸಾಕೆನ್ನುವುದರ ಮಟ್ಟಿಗೆ ತಲುಪಿ ಬಿಟ್ಟೆವು. ಹಳ್ಳಿ ತನ್ನ ಮೂಲ ಸೌಂದರ್ಯವನ್ನು ಕಳಚಲಾರಂಭಿಸಿ ಜನರ ಆಲೋಚನೆಗೆ ತಕ್ಕಂತೆ ಬದಲಾಗತೊಡಗಿತು. ಇದೆಲ್ಲವನ್ನೂ ಗಮನಿಸಿದರೆ ಇಂದು ಪ್ರಸ್ತುತ ಸ್ಥಿತಿಯಲ್ಲಿ ನಿಂತು ಒಮ್ಮೆ ಹಿಂತಿರುಗಿ ನೋಡಿದರೆ ನಾವು ಪಡೆದದಕ್ಕಿಂತ ಕಳೆದುಕೊಂಡಿದ್ದು ಬಹುತೇಕ ಹೆಚ್ಚು. ಹಾಗೆ ನೋಡಿದರೆ ಮುಂದಿನ ಪೀಳಿಗೆಗೆ ನಾವು ಹಳ್ಳಿಯ ಜೀವನ ಶೈಲಿ ಬಗ್ಗೆ ಹೇಳಬಹುದೇ ಹೊರತು ಅದರಲ್ಲಿದ್ದ ಕಲಿಕೆ, ಜ್ಞಾನವನ್ನು ವರ್ಗಾವಣೆ ಮಾಡಲು ನಮ್ಮ ಇಂದಿನ ಪೀಳಿಗೆಗೆ ಸಾಧ್ಯವೆ ಎನ್ನುವುದು ಪ್ರಶ್ನಾರ್ಹ? ಏಕೆಂದರೆ ಜಾನಪದ ಸಾಹಿತ್ಯ ನಮ್ಮ ಬಾಯಲ್ಲಿಲ್ಲ. ಅದರ ಮೌಲ್ಯಗಳು ತಿಳಿದಿಲ್ಲ. ಹಸು, ಕರು, ಕೋಣ, ಕೋಳಿ, ತೋಟ, ಗದ್ದೆ ಹೀಗೆ ಪ್ರಕೃತಿ ಮತ್ತು ಪ್ರಾಣಿ ಪಕ್ಷಿಗಳ ನಡುವೆ ಇದ್ದ ಸಂಬಂಧಗಳ ಅನ್ಯೋನ್ಯತೆ ಅರಿವು ನಮಗಿಲ್ಲ. ಒಟ್ಟಾರೆ ಹಳ್ಳಿ ಬದುಕು ನಗರದ ಬದುಕಿನ ಹಾಗೆ ಮುಂದೊಂದು ದಿನ ಆಗಬಾರದೆಂಬುದೆ ಈ ಲೇಖನದ ಆಶಯ.

# ತುಳುಕೂಟ ಬೆಂಗಳೂರು (ರಿ.)

ನಂ. 11, ಎಸ್–1, 2ನೇ ಮಹಡಿ, ಜೀವನ್ ಬಿಲ್ಡಿಂಗ್, ಕುಮಾರಪಾರ್ಕ್ ಈಸ್ಟ್,
ಶಿವಾನಂದ ಸರ್ಕಲ್ ಹತ್ತಿರ, ಬೆಂಗಳೂರು–560 001

ಸ್ಥಾಪನೆ : 1972

## ಅಭಿನಂದನೆಗಳು



## ಶಾಂತರಾಮ ವಿ. ಶೆಟ್ಟಿ

**'ಮಣ್ಣ ಬಾಜನ' ಕೃತಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ**
**ಪ್ರಶಸ್ತಿ ಪುರಸ್ಕೃತರಾದ ನಮ್ಮ ಕೂಟದ ಸದಸ್ಯರಾದ**
**ತುಳು ಸಾಹಿತಿ ಶಾಂತರಾಮಣ್ಣನವರಿಗೆ**
**ಶುಭ ಕೋರುವ**

| | |
|---|---|
| **ದೇವೇಂದ್ರ ಹೆಗ್ಡೆ ಕೊಕ್ರಾಡಿ** | ಅಧ್ಯಕ್ಷರು |
| **ಅಜಿತ್ ಹೆಗ್ಡೆ ಕೆ** | ಉಪಾಧ್ಯಕ್ಷರು |
| **ಸೇವಂತಿ ಶೆಟ್ಟಿ** | ಉಪಾಧ್ಯಕ್ಷರು |
| **ಸುಂದರ್‌ರಾಜ್ ರೈ** | ಪ್ರಧಾನ ಕಾರ್ಯದರ್ಶಿ |
| **ಗಣೇಶ್ ಎಸ್. ಗುಜರನ್** | ಕಾರ್ಯದರ್ಶಿ |
| **ಹರ್ಷೇಂದ್ರ ಜೈನ್** | ಖಜಾಂಚಿ |
| **ಸುರೇಂದ್ರ ರಾವ್** | ಸಂಘಟನಾ ಕಾರ್ಯದರ್ಶಿ |

**ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಸರ್ವ ಸದಸ್ಯರು**

ADVT.

# BUNTS' SANGHA R.N.S. VIDYANIKETAN - II

Yalachaguppe, Tavarekere, Bangalore - 562130

ಬಂಟರ ಸಂಘ ಬೆಂಗಳೂರು
BUNTS' SANGHA BANGALORE




**Admissions open for**
**Montessori / LKG / UKG / Std I to IV CBSE**
**Academic year 2021-2022**

**FACILITIES**

- ❖ Well furnished smart classrooms
- ❖ Shaping the minds of tiny tots and setting new standards
- ❖ Qualified, dedicated and inspiring faculty
- ❖ Audio visual and activity based method of teaching
- ❖ Competitions are conducted through various clubs to inculcate a "Seeking Spirit" in children
- ❖ CCTV camera surveillance 24/7
- ❖ Voluminous Library
- ❖ Spacious Auditorium
- ❖ Play ground
- ❖ Amphitheatre
- ❖ Affordable fees







Bunts' Sangha RNS Vidyaniketan II, Yalachaguppe, Tavarekere, Bangalore - 562130
Website: www.bsrnsv.com | Contact: 080 - 2339 8922 / 2339 3610 / 97392 17337 / 76194 01540
Email: info@bsrnsv.com

# BUNTS' SANGHA R.N.S. COMPOSITE PU COLLEGE - II

Yalachaguppe, Tavarekere, Bangalore - 562130

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## Admissions open for - I PUC - Academic year 2021-2022

### Distinctive features

- Well furnished smart classrooms
- Qualified, dedicated and inspiring faculty
- CCTV camera surveillance 24/7
- Voluminous Library
- Well equipped Lab
- Spacious Auditorium
- Play ground
- Amphitheatre
- Affordable fees
- Hostels facilities available for Boys & Girls


### Our strengths

- State Ranks in both Science & Commerce each year.
- 100% results in 2019-20.
- State level winner in Netball for 2 years.
- National level winner in Chess, Athletics, Taekwondo.



"Education is not the learning of facts, but the training of the mind to think." - *Albert Einstein*

**2016-17**



Shrinidhi
595 - 99.16% - State
1st Rank - II PU
Commerce




Sumukh Bhoopalam
589 - 98.16% - State
5th Rank - II PU
Science


**2017-18**



Chanchal. A
579 - 96.50%
II PU - Commerce



Hrishikesh. E
584 - 97.33% - State
9th Rank - II PU
Science



Sudarshan. R
584 - 97.33% - State
9th Rank - II PU
Science

**2018-19**



C.Y. Chandana
589 - 98.16% - State
6th Topper
Science




Meghana. C
591 - 98.50% - State
6th Topper
Commerce

**2019-20**



Meghana. R
587 - 97.83% - State
11th Rank - II PU
Commerce



Varun Urs. M. S
583 - 97.17% - State
14th Rank - II PU
Science

### Courses Offered:

**PUC - SCIENCE:**

**P C M B** : (Physics, Chemistry, Mathematics, Biology)
**P C M Cs.** : (Physics, Chemistry, Mathematics, Computer Science)
**P C M E** : (Physics, Chemistry, Mathematics, Electronics)

**PUC - COMMERCE:**

**E B A Cs**: (Economics, Business Studies, Accountancy, Computer Science)
**E B A S** : (Economics, Business Studies, Accountancy, Statistics)

**A Charitable Institution with over 29 years in the field of education at Vijayanagar is venturing into a new, spacious state-of-the-art campus @ Yalachaguppe.**

Bunts' Sangha RNS Vidyaniketan II, Yalachaguppe, Tavarekere, Bangalore - 562130
Website: www.bsrnsv.com | Contact: 080 - 2339 8922 / 2339 3610 / 97392 17337 / 76194 01540
Email: info@bsrnsv.com

# CONGRATULATIONS




## CA. B.T. Shetty

Congratulations on being elected as the
Chairman of Bangalore Branch of the
Institute of Chartered Accountants of India New Delhi (ICAI).
We wish you every success in your new duties.

**With Best Compliments From**

M. Rajeev Shetty
Vinay Kumar Shetty
Praveen Shetty
Prasanna Kumar Shetty
B. Anand Shetty
Sachin Shetty
Sathish Shetty T.
Mahima J. Shetty

CA. Vishwas Shetty T.
CA. Chandrashekar Shetty
CA. Vijay Shetty


**BVC & Co, Chartered Accountants, Bangalore**

ADVT.


Marriages made in heaven, celebrated on Earth,
Designed and excuted by Alankar Events
Alankar Event Management takes your thoughts and inspirations as a starting point and then builds on to create memorable life time events and timeless occasions beyond your wildest dreams that will have your guests talking about your celebration for years to come !
Whether it is a Destination or a Theme Wedding, Silver Jubilee Wedding Anniversary, Milestone Birthday, Sangeet or Mehndi or Pre-Wedding Shoots or you are looking for a creative Wedding Invitation, we have done it all. We ensure that your Big Day is remembered forever and it fits your style, culture, personal choice and of-course the budget.
Alankar Event Management is an award winning event production, design and wedding planning company. We have been around since last 2 decades and are based out of Bangalore, however that doesn't stop us from doing events across India.
Our Services
• Wedding Concepts & Designs
• Personalised Invitations
• Venue Selection
• Catering
• Wedding Stationary
• Decorations
• Master of Ceremony
• Gift Registry
• Bridal Make Up & Hairstyling
• DJ, Special Events & Entertainment
• Photography & Pre-Wedding shoots
• Traditional Vadya and Bands
ABOUT THE FOUNDER
AEM
ALANKAR
EVENT MANAGEMENT

ADVT.


# ಶ್ರದ್ಧಾಂಜಲಿ



**ಶ್ರೀ ಎ.ಕೆ. ಶೆಟ್ಟಿ**
ಸದಸ್ಯತ್ವ ಸಂಖ್ಯೆ: CL001260

ಕ್ಯಾನ್‌ಫಿನ್ ಹೋಮ್ಸ್‌ನ ಸಂಸ್ಥಾಪಕ ಮ್ಯಾನೇಜಿಂಗ್ ಡೈರೆಕ್ಟರ್ ಕಟಪಾಡಿ ಶ್ರೀ ಎ.ಕೆ. ಶೆಟ್ಟಿಯವರು ದಿನಾಂಕ 04.02.2021ರಂದು ತಮ್ಮ 83ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಇನ್ನದಗುತ್ತು ಶ್ರೀಮತಿ ಸುಗಂಧಿ ಕೆ. ಶೆಟ್ಟಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಓರ್ವ ಸಹೋದರ, ಇಬ್ಬರು ಸಹೋದರಿಯರು, ಮೂವರು ಮೊಮ್ಮಕ್ಕಳು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ಉಳ್ತೂರು ಶ್ರೀ ಪ್ರಕಾಶ್ ಶೆಟ್ಟಿಯವರು ದಿನಾಂಕ 20.02.2021ರಂದು ತಮ್ಮ 44ನೇ ವಯಸ್ಸಿನಲ್ಲಿ ನಿಧನರಾದರು. ಬೆಂಗಳೂರಿನಲ್ಲಿ ಉದ್ಯಮವನ್ನು ನಡೆಸುತ್ತಿದ್ದ ಇವರು ತಮ್ಮ ತಂದೆ, ತಾಯಿ, ಪತ್ನಿ ಹೈಕಾಡಿ ಶ್ರೀಮತಿ ಜ್ಯೋತಿ ಪಿ. ಶೆಟ್ಟಿ, ಓರ್ವ ಪುತ್ರಿ, ಓರ್ವ ಸಹೋದರಿ ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಪ್ರಕಾಶ್ ಶೆಟ್ಟಿ**
ಸದಸ್ಯತ್ವ ಸಂಖ್ಯೆ: CL005983



**ಶ್ರೀ ಎನ್.ಟಿ. ರೈ**
ಸದಸ್ಯತ್ವ ಸಂಖ್ಯೆ: CL001202

ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ಮ್ಯಾನೇಜರ್ ನೆಲ್ತಿಲ ಶ್ರೀ ಎನ್.ಟಿ ರೈಯವರು ದಿನಾಂಕ 24.02.2021ರಂದು ತಮ್ಮ 92ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಬಡಿಲಗುತ್ತು ಶ್ರೀಮತಿ ಪ್ರತಿಭಾ ರೈ, ಓರ್ವ ಪುತ್ರ, ಓರ್ವ ಪುತ್ರಿ, ನಾಲ್ವರು ಮೊಮ್ಮಕ್ಕಳು, ಓರ್ವ ಸಹೋದರ ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ಕುಂಜಾಲು ಶ್ರೀ ಸದಾನಂದ ಶೆಟ್ಟಿಯವರು ದಿನಾಂಕ 01.03.2021ರಂದು ತಮ್ಮ 74ನೇ ವಯಸ್ಸಿನಲ್ಲಿ ನಿಧನರಾದರು. ಬೆಂಗಳೂರಿನಲ್ಲಿ ಹೋಟೇಲ್ ಉದ್ಯಮವನ್ನು ನಡೆಸುತ್ತಿದ್ದ ಇವರು ತಮ್ಮ ಪತ್ನಿ ಬಾರ್ಕೂರು ಶ್ರೀಮತಿ ಗೌರಿ ಎಸ್. ಶೆಟ್ಟಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೂವರು ಮೊಮ್ಮಕ್ಕಳು, ಓರ್ವ ಸಹೋದರಿ ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಸದಾನಂದ ಶೆಟ್ಟಿ**
ಸದಸ್ಯತ್ವ ಸಂಖ್ಯೆ: CL014108

ಸ್ಥಾಪನೆ : 1997 ದೂರವಾಣಿ: 23393444

# ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ

**Vijaya Pathina Souharda Sahakari Niyamitha**

ನಂ. 5, ಎಸ್.ಜೆ. ಎಲಿಗೆನ್ಸ್, 4ನೇ ಮಹಡಿ, ಚಂದ್ರಲೇಔಟ್ ಮುಖ್ಯರಸ್ತೆ, ಇನ್‌ಕಮ್ ಟ್ಯಾಕ್ಸ್ ಲೇಔಟ್
ವಿಜಯನಗರ, ಬೆಂಗಳೂರು–560 040.
E-mail: vijaya_souharda@yahoo.in, vijayasouharda@rediffmail.com

**ಶ್ರೀ ಐ. ಜಯಪ್ರಸಾದ್ ಶೆಟ್ಟಿ**
ಅಧ್ಯಕ್ಷರು

**ಶ್ರೀ ಕೆ. ಭಗವಾನ್ ದಾಸ್ ರೈ**
ಉಪಾಧ್ಯಕ್ಷರು

ನಿರ್ದೇಶಕರು :
ಶ್ರೀ ಹೆಚ್. ಶ್ರೀಧರ್ ಹೆಗ್ಡೆ
ಶ್ರೀ ಹರಿಪ್ರಸಾದ್ ಎಸ್. ಶೆಟ್ಟಿ
ಶ್ರೀ ಬಿ. ಸಂತೋಷ್‌ಕುಮಾರ್ ಶೆಟ್ಟಿ
ಶ್ರೀ ಚಂದ್ರಹಾಸ್ ರೈ. ಡಿ
ಶ್ರೀ ಕೆ. ಪ್ರಮೋದ್‌ಚಂದ್ರ ಭಂಡಾರಿ
ಶ್ರೀ ಶಿವಾನಂದ ಶೆಟ್ಟಿ ಟಿ.ಎನ್
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ. ರೈ

ಶ್ರೀ ಕೆ.ಆರ್. ಶೇಷಾದ್ರಿ – ಕಾರ್ಯದರ್ಶಿ

## ಸಾಲಗಳು

- **ಜಾಮೀನು ಸಾಲ : ರೂ. 50,000/–**
- **ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿಂದ 36 ತಿಂಗಳವರೆಗೆ**
- **ವ್ಯಾಪಾರ ಸಾಲ : 1 ಲಕ್ಷದಿಂದ 15 ಲಕ್ಷ**
- **ಗೃಹ ನಿರ್ಮಾಣ ಸಾಲ : 1 ಲಕ್ಷದಿಂದ 20 ಲಕ್ಷ – 120 ತಿಂಗಳು**

**ಸಾಲದ ಬಡ್ಡಿ ದರ : 1 ಲಕ್ಷದವರೆಗೆ 15%, 1 ಲಕ್ಷ ಮೇಲ್ಪಟ್ಟು – 14%**

**ವಿಜಯ ಪತ್ತಿನ ಸೌಹಾರ್ದ ಸಹಕಾರಿ – ಪ್ರಗತಿ ಪಥದತ್ತ**

**ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದೆ. ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿದರವನ್ನು ನೀಡಲಾಗುವುದು. ಶೇರುಗಳನ್ನು ಖರೀದಿಸಿ ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪ್ರತಿದಿನ ಅಥವಾ ವಾರದ ಪಿಗ್ಮಿಯನ್ನು ಸಂಗ್ರಹಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಇವುಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತೆ ಕೋರಲಾಗಿದೆ.**

**2016–17 ರಿಂದ ಕ್ರಮವಾಗಿ 15% ಡಿವಿಡೆಂಡ್ ವಿತರಣೆ**

ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡೋಣ

| | ಬೆಳಿಗ್ಗೆ | ಸಾಯಂಕಾಲ | ವಾರದ ರಜಾದಿನ |
|---|---|---|---|
| ಮಂಗಳವಾರದಿಂದ ಶನಿವಾರದವರೆಗೆ | 9.30 ರಿಂದ 1.00 | 2.00 ರಿಂದ 6.00 | ಸೋಮವಾರ |
| ಭಾನುವಾರ | 9.30 ರಿಂದ 1.00 | ರಜಾ | |

ಅಪೆಕ್ಸ್ ಬ್ಯಾಂಕ್‌ನ ಎಲ್ಲಾ ರಜೆಗಳೂ (ವಾರದ ರಜಾ ಹೊರತು ಪಡಿಸಿ) ಅನ್ವಯಿಸುತ್ತವೆ.
ಸ್ಥಾಪಕ ಅಧ್ಯಕ್ಷರು : **ದಿ|| ಡಾ|| ಐ.ವಿ. ಶೆಟ್ಟಿ – 1997**

ADVT



ಮೂಲ ಪಾಡ್ದನ ಆಧಾರಿತ..
ಕಾರ್ನಿಕೊದ ಕಲ್ಲುರ್ಟಿ
ಚಾರಿತ್ರಿಕ
ತುಳು ಚಲನಚಿತ್ರ
PREMIER SHOW
ಪ್ರವೇಶ ಉಚಿತ
ಸ್ಥಳ : ಬಂಟರ ಸಂಘ
ವಿಜಯನಗರ, ಬೆಂಗಳೂರು
ದಿನಾಂಕ : ಮಾರ್ಚ್ 28ನೇ ರವಿವಾರ
ಸಂಜೆ 5 ಗಂಟೆಗೆ
ಜಯಪ್ರಕಾಶ್ ಶೆಟ್ಟಿ
ವ್ಯವಸ್ಥಾಪಕರು
ಶುಭಕೋರುವವರು
ಆರ್. ಉಪೇಂದ್ರ ಶೆಟ್ಟಿ
ಅಧ್ಯಕ್ಷರು,
ಬಂಟರ ಸಂಘ ಬೆಂಗಳೂರು
ಕೆ. ಪ್ರಕಾಶ್ ಶೆಟ್ಟಿ
ಅಧ್ಯಕ್ಷರು,
ಎಂ. ಆರ್. ಜಿ. ಗ್ರೂಪ್
ಕೆ. ಉಮೇಶ್ ಶೆಟ್ಟಿ
ಕಾರ್ಪೋರೇಟರ್,
ಗೋವಿಂದರಾಜ್ ನಗರ
ಮಧುಕರ ಎಮ್. ಶೆಟ್ಟಿ
ಕಾರ್ಯದರ್ಶಿಗಳು,
ಬಂಟರ ಸಂಘ ಬೆಂಗಳೂರು
ತುಳುವ ಭಾಂದವರು ಕುಟುಂಬ ಸಮೇತರಾಗಿ
ಬಂದು ತುಳುನಾಡಿನ ಮಣ್ಣಿನ ಕಾರಣಿಕದ
ದೈವ ತಾಯಿ ಕಲ್ಲುರ್ಟಿಯ ಮಹಿಮೆಯನ್ನು
ನೋಡಿ ಧನ್ಯರಾಗಿ
ಮುಖ್ಯ ಅತಿಥಿಗಳು
ಗುರುಕಿರಣ್
ನಿರ್ಮಾಪಕರು
ಮಹೇಂದ್ರ ಕುಮಾರ್


ADVT.

**REGISTERED KA/BGW-1589/2021-2023 RNI NO: KARBIL/2005/16402, Date of publication 07.03.2021**
**Licenced post without prepayment License No. WPP-219, Total No. of page 28+4=32**
Licenced to post at Bangalore PSO, Mysore Road, Bengaluru-560026, on 10th or 12th of every Month




ADVT

Printed and Published by : Sri Madhukar M. Shetty on Behalf of Bunts' Sangha Bangalore
#324, Bunts' Sangha Complex, Chord Road, Vijayanagar, Bengaluru - 560 040. Editor : M. Muralidhara Hegde
Printed at Sairam Printers, Vijayanagar, Bengaluru - 560 040. Mob : 9845630847